


# ಕೃಷಿ ಸಂಪದ

## ಈ ಸಂಚಿಕೆ


2 ಇದು ನಮ್ಮ ಗ್ರಾಮೀಣ ಭಾರತ!

4 ನಿಸರ್ಗ ನೋಟ ಚಿತ್ರ ಸಂಪುಟ

5 ಮುಳ್ಳೇಹಣ್ಣು ಅಂಕಣ

10 ಚೇರ್ಕಾಡಿ ರಾಯರ ಸಾಧನೆ


krushi@sampada.net

## ಅಗಲಿದ ಡಾ. ಬೋರ್ಲಾಗ್

ಹಸುರು ಕ್ರಾಂತಿಯ ಹರಿಕಾರ ಡಾ. ನಾರ್ಮನ್ ಇ ಬೋರ್ಲಾಗ್ ನಮ್ಮನ್ನು ಅಗಲಿದ್ದಾರೆ– ಇದೇ ಸೆಪ್ಟೆಂಬರ್ 12ರಂದು. ನೊಬೆಲ್ ಪ್ರಶಸ್ತಿ ಪಡೆದಿದ್ದ ಈ ಅನನ್ಯ ವಿಜ್ಞಾನಿಗೆ ನಮ್ಮದೇಶವು ಪದ್ಮವಿಭೂಷಣ ಪ್ರಶಸ್ತಿಯನ್ನೂ ನೀಡಿ ಗೌರವಿಸಿತ್ತು.
ತನ್ನ ಶೋಧನೆಗಳಿಂದ ಆಹಾರ ಉತ್ಪಾದನೆ ಹೆಚ್ಚಿಸಲು ನೆರವಾಗುವ ಮೂಲಕ ಹಸಿದವರ ಹಸಿವು ತಣಿಸಿದ್ದು ಅವರ ಬದುಕಿನ ಬಹುದೊಡ್ಡ ಸಾಧನೆ. ಏಷಿಯ ಮತ್ತು ಆಫ್ರಿಕದ ಅನೇಕ ದೇಶಗಳು ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗುವುದರಲ್ಲಿ ಅವರು ಶೋಧಿಸಿದ ಹೊಸ ಗೋಧಿಯ ತಳಿಗಳ ಪಾತ್ರ ಪ್ರಧಾನ. ಕೋಟಿಗಟ್ಟಲೆ ಜನರ ಜೀವ ಉಳಿಸಲು ನೆರವಾದ ಈ ಧೀಮಂತನಿಗೊಂದು ಶ್ರದ್ಧಾಂಜಲಿ ಈ ಸಂಚಿಕೆಯ 10ನೇ ಪುಟದಲ್ಲಿದೆ.

## ನಿಮ್ಮೊಂದಿಗೆ.....

"ಕೃಷಿ ಸಂಪದ"ದ ಮೊದಲ ಸಂಚಿಕೆ ನಿಮ್ಮ ಎದುರಿಗಿದೆ. ಇದು ನಮ್ಮ ಪಯಣದ ಮೊದಲ ಹೆಜ್ಜೆ. ಕೃಷಿ ಹಾಗೂ ಗ್ರಾಮೀಣ ಬದುಕಿನ ಬಗ್ಗೆ ಕಾಳಜಿ ಇರುವ ಎಲ್ಲರಿಗೂ "ಕೃಷಿ ಸಂಪದ" ವೇದಿಕೆಯಾಗಲಿ ಎಂಬ ಆಶಯ ನಮ್ಮದು.

ಇದರಲ್ಲಿ:


- ಕೃಷಿ ಹಾಗೂ ಗ್ರಾಮೀಣ ಸಂಗತಿಗಳ ಬಗ್ಗೆ ಚರ್ಚೆ ಮಾಡೋಣ.
- ಸಮಸ್ಯೆಗಳನ್ನೂ ಪರಿಹಾರಗಳನ್ನೂ ದಾಖಲಿಸೋಣ.
- ಅನುಭವಗಳನ್ನೂ ನೋವುನಲಿವುಗಳನ್ನೂ ಹಂಚಿಕೊಳ್ಳೋಣ.
- ಹೊಸ ಚಿಂತನೆ, ಹೊಸ ಹಾದಿಗಳನ್ನು ರೂಪಿಸೋಣ.
- ಕೃಷಿಕಪರ ಧೋರಣೆಗಳು ರೂಪುಗೊಳ್ಳಲು ಸಹಕರಿಸೋಣ.

ಇದೆಲ್ಲದರಿಂದ ಏನಾಗುತ್ತದೆ? ಎಂಬ ಪ್ರಶ್ನೆ ಸಹಜ. ಏನಾಗುತ್ತದೆ ಎಂಬುದನ್ನು ತಿಳಿಯೋದು ಹೇಗೆ? ಎಂಬ ಉತ್ತರವೂ ಸಹಜ. ಹೀಗೆ ಪ್ರಶ್ನೆ ಕೇಳುತ್ತಾ ಕುಳಿತಿದ್ದರೆ, ಮನುಷ್ಯ ಈಗಿನ ರೀತಿಯಲ್ಲಿ ಬದುಕಲು ಸಾಧ್ಯವಾಗುತ್ತಿರಲಿಲ್ಲ, ಅಲ್ಲವೇ?

ಭಾರತದಲ್ಲಿ ಈಗಾಗಲೇ 42 ಕೋಟಿ ಜನರ ಕೈಯಲ್ಲಿ ಮೊಬೈಲ್ ಫೋನ್‌ಗಳಿವೆ. ಅಂಗೈಯಗಲದ ಫೋನಿನಲ್ಲಿ ಇಂಟರ್ನೆಟ್ ಸಂಪರ್ಕ ಕೈಗೆಟಕಿದೆ. ಇನ್ನೇನು, ಅದು ಪ್ರಾಂತೀಯ ಭಾಷೆ ಗಳಲ್ಲೂ ಸಿಗಲಿದೆ. ಇತ್ತೀಚೆಗೆ ಭಾರತದ ಟೆಲಿಕಾಂ ಕ್ರಾಂತಿಯ ಹರಿಕಾರ ಸ್ಯಾಂ ಪಿತ್ರೋದಾ ಹೇಳಿದ್ದನ್ನು ಗಮನಿಸಿ: "ಭಾರತದಲ್ಲಿ ಬ್ರಾಡ್‌ಬ್ಯಾಂಡ್ ಸಂಪರ್ಕ ಹೊಂದಿರುವವರ ಸಂಖ್ಯೆ 2010ರಲ್ಲಿ 100 ಮಿಲಿಯಕ್ಕೆ ಏರಲಿದೆ (ಈಗ ಅದು 6 ಮಿಲಿಯ). ಅದಾಗಲು, ಈಗಿರುವ ಸಾಧನಸಲಕರಣೆಗಳೇ ಸಾಕು." ಹಾಗಾಗಲಿ, ಹಳ್ಳಿಗಳ ಮನೆಮನೆಗೂ "ಕೃಷಿ ಸಂಪದ" ತಲಪಲಿ ಎಂಬ ಕನಸು ನಮ್ಮದು.

ಅಂಚೆ ವೆಚ್ಚದ, ಮುದ್ರಣ ವೆಚ್ಚದ ಭಾರವಿಲ್ಲದೆ "ಕೃಷಿ ಸಂಪದ" ಹಗುರವಾಗಿದೆ. ವರ್ಣಮಯವಾಗಿದೆ. ವಿಷಯ ಸಮೃದ್ಧವಾಗಿಸಲು ನೀವೂ ಕೈಜೋಡಿಸಿ."ಕೃಷಿ ಸಂಪದ" ಇಡೀ ಜಗತ್ತಿಗೇ ತೆರೆದುಕೊಳ್ಳುತ್ತಿದೆ, ದೇಶದ ಗಡಿ ಹಾಗೂ ಕಾಲದ ಮಿತಿ ದಾಟಿ, ಎಂಬ ಸಂಭ್ರಮ ನಿಮ್ಮ–ನಮ್ಮೆಲ್ಲರದು.

– ಅಡ್ಡೂರು ಕೃಷ್ಣ ರಾವ್



## ಮೊದಲ ಸಂಚಿಕೆ


ಸಂಪುಟ: 1 ಸಂಚಿಕೆ: 1
ಅಕ್ಟೋಬರ್, 2009

**ಸಂಪಾದಕರು: ಅಡ್ಡೂರು ಕೃಷ್ಣರಾವ್**

ಕೃಷಿ ಸಂಪದ ತಂಡ:
ಶಿವಾನಂದ ಕಳವೆ, ಮಲ್ಲಿಕಾರ್ಜುನ ಹೊಸಪಾಳ್ಯ
ಚಾಮರಾಜ ಸವಡಿ, ಭೂಷಣ್ ಮಿಡಿಗೇಷಿ, ಕೆ ಶಾಮ ಭಟ್
ಶಾಮ ಕಶ್ಯಪ, ವಸಂತ ಕಜೆ

ಚಿತ್ರಗಳು:
ಎಂ ಎಸ್ ಹೆಬ್ಬಾರ್, ಅಡ್ಡೂರು ಕೃಷ್ಣರಾವ್, ವಸಂತ ಕಜೆ
ಮಲ್ಲಿಕಾರ್ಜುನ ಹೊಸಪಾಳ್ಯ, ಶ್ರೀ ಪಡ್ರೆ, ಭೂಷಣ್ ಮಿಡಿಗೇಷಿ
ಎನ್ ರಘುಪತಿ, ಮಾರುತಿ ಎಚ್ ಕಟ್ಟೀಮನಿ, ಪ್ರೀತಮ್ ಪದ್ವಾಳ್,
ಹರಿಪ್ರಸಾದ್ ನಾಡಿಗ್

ಪುಟ ವಿನ್ಯಾಸ:
ಅಪಾರ

ಸಂಪರ್ಕ:
krushi@sampada.net
ದೂರವಾಣಿ: 080–32900111
ಸಮುದಾಯ: http://krushi.sampada.net

'ಕೃಷಿ ಸಂಪದ' –'ಸಂಪದ'ದ ಒಂದು ಯೋಜನೆ.

ನಮ್ಮ ಕೃತಜ್ಞತೆಗಳು:
ಈ ಸಂಚಿಕೆಯ ಬಿಡುಗಡೆ ಕಾರ್ಯಕ್ರಮ ಆಯೋಜಿಸಲು ನೆರವಾದ
ಸೆಂಟರ್ ಫಾರ್ ಇಂಟರ್ನೆಟ್ & ಸೊಸೈಟಿಗೆ.
ಪ್ರೋತ್ಸಾಹ ನೀಡಿದ ನಾಗೇಶ ಹೆಗಡೆಯವರಿಗೆ.



ಲೇಖನಗಳ ಅಭಿಪ್ರಾಯಗಳು ಮತ್ತು ಹಕ್ಕುಗಳು ಅಯಾ ಲೇಖಕರದ್ದು.
ಚಿತ್ರಗಳನ್ನು ಹೊರತುಪಡಿಸಿ ಕೃಷಿ ಸಂಪದ ಇ–ಪತ್ರಿಕೆಯಲ್ಲಿರುವ
ಕಂಟೆಂಟ್ Creative Commons Atribution Share Alike
ಲೈಸೆನ್ಸಿನಡಿ ಲಭ್ಯವಿದೆ.

BY NC SA


*ಈ ಸಂಚಿಕೆಯ ಕುರಿತು ನಿಮ್ಮ ಪ್ರತಿಕ್ರಿಯೆಗಳು ಹಾಗು ಸಲಹೆಗಳಿಗೆ ಸ್ವಾಗತ. 'ಕೃಷಿಸಂಪದ'ದಲ್ಲಿ ನೀವೆಲ್ಲರೂ ಭಾಗವಹಿಸಬಹುದು. ಲೇಖನ ಮತ್ತು ಫೋಟೋಗಳನ್ನು ಕಳುಹಿಸಿಕೊಡಬಹುದು. 'ಕೃಷಿ ಸಂಪದ' ಆನ್ಲೈನ್ ಸಮುದಾಯದ ಚಟುವಟಿಕೆಗಳಲ್ಲೂ ಭಾಗವಹಿಸಬಹುದು. ಮುಂದಿನ ಸಂಚಿಕೆಯ ಬರಹಗಳಿಗಾಗಿ ನಿಮ್ಮ ಸುಳಿವುಗಳೂ ಅತ್ಯವಶ್ಯಕ.*

# ದೈವಿಕ ಶಕ್ತಿ ಒಲಿಸಿಕೊಳ್ಳಲು ಅಮಾಯಕ ಮಕ್ಕಳ ಬಲಿ

## ಶಿಲಾಯುಗವೆಂಬುದು ಎಂದೋ ಇದ್ದದ್ದಲ್ಲ. ನಮ್ಮ ಹಳ್ಳಿಗಳಲ್ಲಿ ಆಗಾಗ ಕಾಣುವಂಥದ್ದು!

**ಇದು ನಮ್ಮ ಗ್ರಾಮೀಣ ಭಾರತ!**

ಅದೊಂದು ಹಳ್ಳಿ. ಅಲ್ಲಿ ಮೂವರು ಮುಗ್ಧ ಮಕ್ಕಳು ಸತ್ತು ಬಿದ್ದದ್ದು ಎಪ್ರಿಲ್ 2009ರಲ್ಲಿ. ಹೊಟ್ಟೆ ನೋವಿನಿಂದ ಸಂಕಟ ಪಡುತ್ತಾ ಪ್ರಾಣ ಬಿಟ್ಟಳು ಮೂರು ವರುಷ ವಯಸ್ಸಿನ ಪ್ರಿಯದರ್ಶಿನಿ. ಸ್ವಲ್ಪ ಸಮಯದ ಮುಂಚೆ ಅದೇ ಕಾರಣದಿಂದ ಇಹಲೋಕ ತ್ಯಜಿಸಿದ್ದರು ಏಳು ವರುಷ ವಯಸ್ಸಿನ ವಿನೋದ ಮತ್ತು ಧಿನೇಶ.

ಇದೆಲ್ಲ ನಡೆದದ್ದು ತಮಿಳ್ನಾಡಿನ ಸೇಲಂ ಜಿಲ್ಲೆಯ ಅತ್ತೂರು ಹತ್ತಿರದ ಪಾಳಯ ಉದಯಾಮ್‌ಪಳ್ಳಿ ಹಳ್ಳಿಯಲ್ಲಿ. ಇವರಲ್ಲದೆ, 20 ಜನವರಿ 2009ರಂದು ಮೃತರಾದ ಮೂವರು ಮಕ್ಕಳು: ಗೋಕುಲರಾಜ್ (4 ವರುಷ), ಜಯಕುಮಾರ್ (7 ವರುಷ) ಮತ್ತು ಸುರೇಶ್‌ಕುಮಾರ್ (2 ವರುಷ). ಆರು ಮಕ್ಕಳೂ ಆಯಾ ಕುಟುಂಬದ ಹಿರಿಯ ಮಕ್ಕಳು. ಇದರಿಂದಾಗಿ ಭಯಭೀತರಾದ ಹಲವು ಕುಟುಂಬಗಳು ಆ ಹಳ್ಳಿ ತೊರೆದವು. ಈ ನಡುವೆ ಅಲ್ಲಿಗೆ ಭೇಟಿಯಿತ್ತ ವೈದ್ಯರ ತಂಡಕ್ಕೆ ಯಾವುದೇ ರೋಗದ ಕುರುಹು ಕಾಣಿಸಲಿಲ್ಲ.

ಪ್ರಿಯದರ್ಶಿನಿ ಸತ್ತಾಗ ಮಾತ್ರ ಹಳ್ಳಿಯಲ್ಲಿ ಕಣಿ ಹೇಳುವ ಪೆರುಮಾಯಿ (35 ವರುಷ ವಯಸ್ಸಿನ) ಬಗ್ಗೆ ಹಳ್ಳಿಗರ ಸಂಶಯ ಬಲವಾಯಿತು. ಯಾಕೆಂದರೆ ಅವಳು ಮತ್ತು ಆ ಮುಂಚೆ ತೀರಿಕೊಂಡ ಇತರ ಮಕ್ಕಳು ಸಾಯುತ್ತಾರೆಂದು ಅವಳು ಕಣಿ ಹೇಳಿದ್ದಳು. ಆಕೆ ಕಣಿ ಹೇಳಿದ ಆರೇಳು ಗಂಟೆಗಳಲ್ಲಿ ಪ್ರತಿಯೊಬ್ಬ ಬಾಲಕಿ ಅಥವಾ ಬಾಲಕ ಜೀವ ಬಿಟ್ಟಿದ್ದರು.

ಪ್ರಿಯದರ್ಶಿನಿ ಪ್ರಾಣ ಬಿಡುವ ಮುಂಚೆ ತನ್ನ ಅಮ್ಮನೊಂದಿಗೆ ಹೀಗೆಂದಿದ್ದಳು, "ಪೆರುಮಾಯಿ ಮತ್ತು ಅವಳ ಗಂಡ ನನಗೆ ಬಲಾತ್ಕಾರದಿಂದ ಸಿಹಿ ಅನ್ನ ತಿನ್ನಿಸಿದ್ದರು." ಇದನ್ನು ತಿಳಿದುಕೊಂಡಾಗ ಮೃತ ಮಕ್ಕಳ ಹೆತ್ತವರಿಗೆ ಯಾವುದೇ ಸಂಶಯ ಉಳಿಯಲಿಲ್ಲ. ಅಂತಿಮವಾಗಿ ಪ್ರಿಯದರ್ಶಿನಿಯ ತಂದೆ ಸುಬ್ರಮಣಿ ಮತ್ತು ವಿನೋದನ ತಂದೆ ಚಿನ್ನಸ್ವಾಮಿ ಅತ್ತೂರು ಪೊಲೀಸ್ ಠಾಣೆಗೆ ದೂರು ನೀಡಿದರು.

ಪೊಲೀಸರು ಕ್ರಿಮಿನಲ್ ದಂಡ ಸಂಹಿತೆಯ ಸೆಕ್ಷನ್ 174 ಪ್ರಕಾರ ದೂರು ದಾಖಲಿಸಿಕೊಂಡರು. ಪ್ರಿಯದರ್ಶಿನಿ ಮತ್ತು ವಿನೋದನ ಶವಗಳನ್ನು ಮರಣೋತ್ತರ ಪರೀಕ್ಷೆಗೆ ಕಳಿಸಿದರು – ಕೊಯಂಬತ್ತೂರಿನ ಫೊರೆನ್ಸಿಕ್ ಪ್ರಯೋಗಾಲಯಕ್ಕೆ. ಈ ಪರೀಕ್ಷಾ ವರದಿಗಳ ಪ್ರಕಾರ, "ಫೋರೇಟ್ ವಿಷಪ್ರಾಶನದಿಂದ ಸಾವು ಸಂಭವಿಸಿದಂತೆ ಕಾಣುತ್ತದೆ". ಫೋರೇಟ್ ತೀವ್ರ ವಿಷಕಾರಿ ಆರ್ಗನೋಫಾಸ್ಪರಸ್ ಕೀಟನಾಶಕ.

ಪೊಲೀಸರು ಪೆರುಮಾಯಿ ಮನೆಗೆ ದಾಳಿ ಮಾಡಿ 250 ಗ್ರಾಂ ಇಲಿ ಪಾಷಾಣ ವಶಪಡಿಸಿಕೊಂಡರು. ಆಗ ಅಕ್ಕಿಚೆಟ್ಟಿಪಾಳಯಂ ಗ್ರಾಮದ ಆಡಳಿತಾಧಿಕಾರಿಯ ಎದುರು ಶರಣಾದರು –ಪೆರುಮಾಯಿ ಮತ್ತು ಅವಳ ಪತಿ. ಇವರನ್ನು ಬಂಧಿಸಿದ ಪೊಲೀಸರ ಪ್ರಕಾರ "ದೈವಿಕ ಶಕ್ತಿ ಪಡೆಯಲು ಸಹಾಯವಾಗುತ್ತದೆ ಎಂಬ ಕಾರಣಕ್ಕಾಗಿ ಈ ಮುಗ್ಧ ಮಕ್ಕಳಿಗೆ ವಿಷ ಕೊಟ್ಟು ಕೊಂದದ್ದನ್ನು ಆಪಾದಿತರು ಒಪ್ಪಿಕೊಂಡಿದ್ದಾರೆ".

ಈಗಲೂ ಹೀಗಿದೆ ನಮ್ಮ ಗ್ರಾಮೀಣ ಭಾರತ!

– ಅಡ್ಡೂರು ಕೃಷ್ಣ ರಾವ್



# ಸಾವಯವಕೆ ಒಲಿದ ಮಲ್ಲೇನಹಳ್ಳಿ

ಈ ಊರಿನಾದ್ಯಂತ ಸಾವಯವ ಕೃಷಿ ಉದ್ದೇಶಗಳಿಗೆ ಸಂಬಂಧಿಸಿದ ಗೋಡೆ ಬರಹಗಳನ್ನು, ಮಾಹಿತಿಗಳನ್ನು ಚಿತ್ರ ಸಮೇತ ಬರೆಸಲಾಗಿದೆ.

**ಕಸದಿಂದಲೇ ಬರಲಿ ರಸ**

ಮಲ್ಲಿಕಾರ್ಜುನ ಹೊಸಪಾಳ್ಯ

ತುಮಕೂರಿನಿಂದ 85 ಕಿ.ಮೀ. ಮತ್ತು ತಿಪಟೂರಿನಿಂದ 10 ಕಿ.ಮೀ. ದೂರದಲ್ಲಿರುವ ವಿ.ಮಲ್ಲೇನಹಳ್ಳಿ 90 ಕುಟುಂಬಗಳ ಗ್ರಾಮ. ತುಮಕೂರು–ಚನ್ನರಾಯಪಟ್ಟಣ ರಸ್ತೆಯ ಪಕ್ಕದಲ್ಲಿದೆ. ಬೇಸಾಯ ಮತ್ತು ಕೂಲಿ ಎಲ್ಲಿನ ರೈತರ ಮುಖ್ಯ ಕಸುಬಾದರೆ ಹಸು, ಎಮ್ಮೆ ಮತ್ತು ಕುರಿ ಸಾಕಾಣಿಕೆ ಉಪಕಸುಬುಗಳು. ರಾಗಿ, ಭತ್ತ, ತೆಂಗು, ಅಡಿಕೆ, ಬಾಳೆ, ಹಲಸು, ಮಾವು ಮುಖ್ಯ ಬೆಳೆಗಳು. ಹೂವಿನ ಕೃಷಿಯೂ ಇಲ್ಲಿ ಪ್ರಚಲಿತ. ಪ್ರಸಿದ್ಧ ಧಾರ್ಮಿಕ ಸ್ಥಳವಾದ ಕೆರೆಗೋಡಿ–ರಂಗಾಪುರ ಮಠವು ಈ ಗ್ರಾಮದಿಂದ ಕೇವಲ 3 ಕಿ.ಮೀ.ದೂರದಲ್ಲಿದೆ. ಈ ಗ್ರಾಮಕ್ಕೆ ಹಿಂದೆ ಒಡೆಯರ ಮಲ್ಲೇನಹಳ್ಳಿ ಎಂಬ ಹೆಸರಿತ್ತು, ಕ್ರಮೇಣ ಆಡುಭಾಷೆಯಲ್ಲಿ ವಡ್ಡರ ಮಲ್ಲೇನಹಳ್ಳಿಯಾಗಿ ಪರಿವರ್ತನೆಯಾಗಿದೆ.

ಮಾರ್ಚಿ 2007ರಿಂದ ಸಾವಯವಗ್ರಾಮ ಯೋಜನೆ ಇಲ್ಲಿ ಆರಂಭವಾಯಿತು. ರಾಸಾಯನಿಕ ಕೃಷಿಯ ಬಗ್ಗೆ ಅಷ್ಟೊತ್ತಿಗಾಗಲೇ ಬೇಸತ್ತಿದ್ದ ರೈತಾಪಿಗಳು ಈ ಯೋಜನೆಯನ್ನು ಸ್ವಾಗತಿಸಿದರು. ಯೋಜನೆ ಪ್ರಾರಂಭಕ್ಕೆ ಕೆಲವು ತಿಂಗಳ ಮುಂಚೆ ಹತ್ತಿರದ ಕೆರೆಗೋಡಿ ರಂಗಾಪುರದಲ್ಲಿ 3 ದಿವಸಗಳ ಕಾಲ ಸುಭಾಷ್ ಪಾಳೇಕರ್‌ರವರ ನೈಸರ್ಗಿಕ ಕೃಷಿ ತರಬೇತಿ ನಡೆದಿತ್ತು. ಅದರಲ್ಲಿ ಭಾಗವಹಿಸಿದ್ದ ಕೆಲವು ಗ್ರಾಮಸ್ಥರಿಗೆ ಸಾವಯವ ಕೃಷಿಯ ಬಗ್ಗೆ ಅಲ್ಪ ಸ್ವಲ್ಪ ಅರಿವಿತ್ತು.

ಪ್ರಾರಂಭಿಕ ಹಂತದಲ್ಲಿ ಹಲವಾರು ತರಬೇತಿ ಮತ್ತು ಅಧ್ಯಯನ ಪ್ರವಾಸಗಳನ್ನು ಹಮ್ಮಿಕೊಳ್ಳಲಾಗಿತ್ತು. ಈಗಾಗಲೇ ಸಾವಯವ ಕೃಷಿಯಲ್ಲಿ ಗಣನೀಯ ಸಾಧನೆ ಮಾಡಿರುವ ಮಾರಗೊಂಡನಹಳ್ಳಿಯ ಸದಾಶಿವಯ್ಯ, ವಿಠಲಾಪುರದ ವೀರಣ್ಣ, ಶಿವಮೊಗ್ಗದ ಪ್ರಫುಲ್ಲಚಂದ್ರ, ಹುಲ್ಲೆಕೆರೆ ಸಮುದಾಯ ನಾಟಿ ಬೀಜಬ್ಯಾಂಕ್, ಚೇರ್ಕಾಡಿ ರಾಮಚಂದ್ರರಾಯರು... ಹೀಗೆ ಹಲವರ ತೋಟಗಳಿಗೆ ಭೇಟಿಯಿತ್ತು ಅವರಿಂದ ಸಾಕಷ್ಟು ಮಾಹಿತಿ ಪಡೆದುಕೊಂಡರು ಇಲ್ಲಿನ ರೈತರು.

ಊರಿನಾದ್ಯಂತ ಸಾವಯವ ಕೃಷಿ ಉದ್ದೇಶಗಳಿಗೆ ಸಂಬಂಧಿಸಿದ ಗೋಡೆ ಬರಹಗಳನ್ನು ಚಿತ್ರ ಸಮೇತ ಬರೆಸಲಾಗಿದೆ. ಕಾಂಪೋಸ್ಟ್ ತಯಾರಿಕೆ, ಎರೆಗೊಬ್ಬರದ ಮಹತ್ವ, ನಾಟಿ ಬೀಜಗಳ ಅಗತ್ಯ, ಗಂಜಲದ ಗುಟ್ಟು ಹೀಗೆ ಸಾವಯವಕ್ಕೆ ಸಂಬಂಧಿಸಿದ ಮಾಹಿತಿ ಬರೆಯಲಾಗಿದೆ. ಚಿತ್ರಗಳಿರುವುದರಿಂದ ಎಲ್ಲರಿಗೂ ಇವು ಅರ್ಥವಾಗುತ್ತವೆ. ಇದು ಊರಿನಲ್ಲಿ ಉತ್ತಮವಾದ ಸಾವಯವ ವಾತಾವರಣ ಬೆಳೆಯಲು ಸಹಕಾರಿಯಾಗಿದೆ. ಮಕ್ಕಳು ಸಹ ಇವುಗಳನ್ನು ಓದುವುದರಿಂದ ಅವರಿಗೂ ಸಂದೇಶ ತಲಪುತ್ತದೆ.

ಸಾವಯವ ಕೃಷಿಗೆ ಎರೆಹುಳು ಗೊಬ್ಬರವೇ ಅಡಿಗಲ್ಲು. ಕಡಿಮೆ ಅವಧಿಯಲ್ಲಿ ಉತ್ಪಾದಿಸಬಹುದಾದ ಎರೆಗೊಬ್ಬರವು ಬೇಗ ಫಲಿತಾಂಶವನ್ನೂ ನೀಡಬಲ್ಲದು. ಹಾಗಾಗಿ ಅದಕ್ಕೆ ಒತ್ತು ನೀಡಿದ್ದು ಪ್ರಸ್ತುತ 48 ಎರೆಹುಳು ತೊಟ್ಟಿ ನಿರ್ಮಾಣವಾಗಿದೆ. ಬಹುತೇಕ ತೊಟ್ಟಿಗಳಲ್ಲಿ ಗೊಬ್ಬರ ಉತ್ಪಾದನೆ ಪ್ರಾರಂಭವಾಗಿದೆ. ಹಲವಾರು ರೈತರು ಕ್ವಿಂಟಾಲ್‌ಗಟ್ಟಲೆ ಗೊಬ್ಬರ ತೆಗೆದು ಬಳಸುತ್ತಿದ್ದಾರೆ. ಗ್ರಾಮದ ಕಾಂತಮ್ಮನವರಿಗೆ ಎರೆಹುಳು ಗೊಬ್ಬರ ಮಾಡುವುದರಲ್ಲಿ ಅತ್ಯುತ್ಸಾಹ. ಮನೆಯ ಪಕ್ಕದಲ್ಲೇ ತೊಟ್ಟಿ ಇದ್ದು ಈಗಾಗಲೇ ಹಲವು ಸಲ ಗೊಬ್ಬರ ತೆಗೆದು ಬಳಸಿದ್ದಾರೆ. ಸಪೋಟ, ಬಾಳೆ ಮುಂತಾದವು ಎರೆಗೊಬ್ಬರ ಹಾಕಿದ್ದರಿಂದ ಹುಲುಸಾಗಿ ಬೆಳೆದಿವೆ ಎನ್ನುತ್ತಾರೆ ಇವರು.

ಮತ್ತೊಬ್ಬ ರೈತ ಶಂಭುಲಿಂಗಯ್ಯನವರು ತಮ್ಮ ಬಾಳೆ ತೋಟಕ್ಕೆ ಅಲಸಂದೆ (ತರಗುಣಿ)ಯನ್ನು ಎರೆಗೊಬ್ಬರದೊಂದಿಗೆ ಮಿಶ್ರಮಾಡಿ ಬಿತ್ತಿದ್ದು ಅತ್ಯಂತ ಹುಲುಸಾಗಿ ಬೆಳೆದಿದೆ. ಬಾಳೆ, ತರಗುಣಿ ಎರಡೂ ಸಹ ಹಚ್ಚ ಹಸುರಾಗಿ ಬೆಳೆದಿವೆ. ದಾರಿಯ ಪಕ್ಕದಲ್ಲೇ ಈ ತೋಟವಿರುವುದರಿಂದ ಎಲ್ಲರೂ ಇದನ್ನು ನೋಡಿ ಎರೆಗೊಬ್ಬರಕ್ಕೆ ಎಂತಹ ಶಕ್ತಿ ಇದೆ ಎಂದುಕೊಳ್ಳುತ್ತಿದ್ದಾರೆ. ಅವರೂ ಎರೆಗೊಬ್ಬರ ಬಳಸಲು ಮನಸ್ಸು ಮಾಡುತ್ತಿದ್ದಾರೆ. ತಮ್ಮ ತೋಟ–ಕ್ಕೆ ಎರೆಗೊಬ್ಬರ ಹಾಕಿ ಉತ್ತಮ ಫಲಿತಾಂಶ ಕಂಡಿರುವ ಪ್ರಗತಿಪರ ರೈತ ಮಲ್ಲಿಕಾರ್ಜುನಯ್ಯ "ರಸಗೊಬ್ಬರ ಅಭಾವದಿಂದ ಆತ್ಮಹತ್ಯೆ ಮಾಡಿಕೊಳ್ಳುವವರು ಹೊಲಕ್ಕೆ ಎರೆಗೊಬ್ಬರ ಹಾಕಿದರೆ ಅತ್ಯಂತ ಕಡಿಮೆ ಖರ್ಚಿನಲ್ಲಿ ಉತ್ತಮ ಬೆಳೆ ಬೆಳೆಯಬಹುದು" ಎನ್ನುತ್ತಾರೆ. ಉಳಿದೆಲ್ಲಾ ಸದಸ್ಯರ ಪ್ರಕಾರ ಇವರ ಮಾತು ನೂರಕ್ಕೆ ನೂರು ಸತ್ಯ. ಎರೆಗೊಬ್ಬರ ತೊಟ್ಟಿಗಳಲ್ಲದೆ 25 ಕಾಂಪೋಸ್ಟ್ ಗುಂಡಿಗಳ ನಿರ್ಮಾಣವಾಗಿದೆ. ಮುಂಚೆ ವೃಥಾ ಬಿಸಾಡುತ್ತಿದ್ದ ಇಲ್ಲವೇ ಸುಡುತ್ತಿದ್ದ ಸಾವಯವ ತ್ಯಾಜ್ಯಗಳನ್ನು ಕಾಂಪೋಸ್ಟ್ ಗುಂ–ಡಿಗೆ ಹಾಕುವ ಮೂಲಕ ಅದನ್ನು ಗೊಬ್ಬರವಾಗಿ ಪರಿವರ್ತನೆ ಮಾಡುತ್ತಿದ್ದಾರೆ. ಇದೊಂದು ಉತ್ತಮ ಬೆಳವಣಿಗೆ.

ಗ್ರಾಮದ ಹಲವರ ಕೊಟ್ಟಿಗೆಗಳಲ್ಲಿ ಗಂಜಲ ಶೇಖರಿಸುವ ವ್ಯವಸ್ಥೆ ಇರಲಿಲ್ಲ. ಸಾವಯವ ಕೃಷಿಗೆ ಗಂಜಲ ಅತ್ಯಗತ್ಯವಾಗಿ ಬೇಕಾಗಿರುವುದರಿಂದ ಗಂಜಲ ಶೇಖರಣೆಗೆ ಗುಂಡಿ ನಿರ್ಮಿಸಲು ಅವಕಾಶ ಕಲ್ಪಿಸಲಾಗಿದೆ. 20 ಜನರು ಈಗಾಗಲೇ ಇದರ ಪ್ರಯೋಜನ ಪಡೆದಿದ್ದಾರೆ. 2 ಅಡಿ ಅಗಲ, ಉದ್ದ ಮತ್ತು ಆಳದ ಗುಂಡಿಗಳನ್ನು ಕೊಟ್ಟಿಗೆಗೆ ಸಂಪರ್ಕ ಕಲ್ಪಿಸುವಂತೆ ನಿರ್ಮಿಸಲಾಗಿದೆ. ಎರಡು–ಮೂರು ದಿನಗಳಿಗೊಮ್ಮೆ ಗಂಜಲವನ್ನು ತೆಗೆದು ಅಡಿಕೆ, ತೆಂಗು, ಬಾಳೆ ಗಿಡದ ಬುಡಕ್ಕೆ ನೇರವಾಗಿ ಕೆಲವರು ಹಾಕುತ್ತಿದ್ದಾರೆ, ಇನ್ನು ಕೆಲವರು ತಿಪ್ಪೆಗೆ ಹಾಕುತ್ತಿದ್ದಾರೆ.

## ಮಣ್ಣು, ನೀರಿನ ಸಂರಕ್ಷಣೆಗೆ ಒತ್ತು

ಸಾವಯವ ಕೃಷಿಗೆ ಅತ್ಯಂತ ಮೂಲಭೂತ ಅಂಶ ಮಣ್ಣು-ನೀರಿನ ಸಂರಕ್ಷಣೆ. ದಶಕಗಳಿಂದ ರಾಸಾಯನಿಕಗಳನ್ನು ಬಳಸಿ ಬರಡಾಗಿರುವ ಮಣ್ಣನ್ನು ಹದ ಮಾಡಲು ಮೊದಲು ಆಗಬೇಕಾದ ಕೆಲಸ ಇದು. ಇದುವರೆಗೆ 4 ಜನ ರೈತರು ಕೃಷಿ ಹೊಂಡ ಮಾಡಿಕೊಂಡಿದ್ದಾರೆ. ಅವರಲ್ಲಿ ಮಲ್ಲಿಕಾರ್ಜುನಯ್ಯನವರು ತಾವೂ ಸ್ವಲ್ಪ ಹಣ ಹಾಕಿ 100 ಅಡಿ ಉದ್ದ, 40 ಅಡಿ ಅಗಲ ಮತ್ತು 10 ಅಡಿ ಆಳದ ವಿಶಾಲ ಕೃಷಿ ಹೊಂಡ ಮಾಡಿಕೊಂಡಿದ್ದಾರೆ. ಇದರಿಂದ ಹೆಚ್ಚು ನೀರು ನಿಲ್ಲಲು ಅನುಕೂಲವಾಗಿದೆ. ಇವರು ತಮ್ಮ ತೆಂಗಿನ ತೋಟದಲ್ಲಿ ಇಳಿಜಾರಿಗೆ ಅಡ್ಡಲಾಗಿ ಬದುಗಳನ್ನು ಹಾಕಿ ಅದರ ದಡದ ಮೇಲೆ ಹರಳು ಬೆಳೆಸಿದ್ದಾರೆ. ಟ್ರೆಂಚ್‌ಗಳಲ್ಲಿ ಕೃಷಿ ತ್ಯಾಜ್ಯಗಳನ್ನು ಹಾಕಿ ಗೊಬ್ಬರ ಮಾಡುತ್ತಿದ್ದಾರೆ. ವರ್ಷಪೂರ್ತಿ ಹಣ್ಣು ಬಿಡುವ ಹಲಸಿನ ಮರದಿಂದ ಇವರಿಗೆ ವರ್ಷವಿಡೀ ತ್ಯಾಜ್ಯ ಲಭ್ಯ..

ಇವರಲ್ಲದೆ ಇನ್ನೂ 17 ರೈತರು ತಮ್ಮ-ತಮ್ಮ ತೋಟಗಳಲ್ಲಿ ಟ್ರೆಂಚ್‌ಗಳನ್ನು ವ್ಯವಸ್ಥಿತವಾಗಿ ಹಾಕಿಕೊಂಡಿದ್ದಾರೆ. ಇದ-ರಿಂದ ಬಿದ್ದ ಮಳೆ ನೀರು ವೇಗವಾಗಿ ಹರಿದು ಹೋಗದೆ ಅಲ್ಲಿಯೇ ಇಂಗುತ್ತದೆ. ಮಣ್ಣಿನ ಸವಕಳಿಯೂ ತಪ್ಪಿದಂತಾಗಿದೆ ಎಂಬುದು ರೈತರ ಅನಿಸಿಕೆ. ಇನ್ನೂ ಹೆಚ್ಚಿನ ರೈತರಿಗೆ ಇದನ್ನು ಹಾಕಿಕೊಳ್ಳಲು ಅವಕಾಶ ಕಲ್ಪಿಸಬೇಕೆಂಬುದು ಇವರ ಅಭಿಪ್ರಾಯ. ಮುಂಚೆ ರೈತರು ತಮ್ಮ-ತಮ್ಮ ಹೊಲಗಳಲ್ಲಿನ ಕಸ-ಕಡ್ಡಿ, ಗರಿ, ಸೋಗೆ ಮುಂತಾದವನ್ನು ಹೊಲದಲ್ಲಿ ಗುಡ್ಡೆ ಹಾಕಿ ಸುಡುತ್ತಿದ್ದರು. ಆದರೆ ಈಗ ಸಲುವಾಗಿ ತರಕಾರಿ ಬೀಜಗಳನ್ನು ಯೋಜನೆ ವತಿಯಿಂದ ಪೂರೈಸಲಾಗಿದೆ" ಎನ್ನುತ್ತಾರೆ.

ಶಿವಗಂಗಮ್ಮ ಎನ್ನುವರು ತಮ್ಮ ಪುಟ್ಟ ಕೈತೋಟದಲ್ಲಿ ಸೊಪ್ಪು, ಟೊಮೆಟೋ, ದಂಟು ಮುಂತಾದ ಮನೆಗೆ ಬೇಕಾದ ಅನೇಕ ತರಕಾರಿಗಳನ್ನು ಬೆಳೆದಿದ್ದಾರೆ, ಬಚ್ಚಲು ನೀರಿನಲ್ಲಿಯೇ ಇವು ಬೆಳೆಯುವುದರಿಂದ ಪ್ರತ್ಯೇಕ ನೀರಿನ ಅಗತ್ಯವಿಲ್ಲ. ಸುತ್ತಲೂ ತಡಿಕೆ ನಿರ್ಮಿಸಿದ್ದು ಜಾನುವಾರುಗಳ ಕಾಟವನ್ನು ತಪ್ಪಿಸಿದಂತಾಗಿದೆ. ಇವರ ಕೈತೋಟದ ವಿಶೇಷ ನಾಟಿ ತಳಿ ಮುಸುಕು ಬದನೆ.

ಇವರಲ್ಲದೆ ಸಿದ್ದಗಂಗಮ್ಮ, ಸೌಮ್ಯ, ಭಾಗ್ಯ, ನೇತ್ರ, ಸಮಿತಿಯ ಕಾರ್ಯದರ್ಶಿಗಳಾದ ಅನ್ನಪೂರ್ಣ ಮುಂತಾದ ಅನೇಕ ಮಹಿಳೆಯರು ಕೈತೋಟಗಳಲ್ಲಿ ತರಕಾರಿ ಬೀಜಗಳನ್ನು

## ಸಾ ವ ಯ ವ ವೇ ಲೇ ಸು!

ಮಲ್ಲೇನಹಳ್ಳಿ ಗ್ರಾಮದ ಸಾವಿತ್ರಮ್ಮ ಬೋರಪ್ಪ ದಂಪತಿಗಳಿಗೆ ಮೂರು ಎಕರೆ ಜಮೀನಿದೆ. ತೆಂಗು, ಅಡಿಕೆ, ಹೂವಿನ ಬೇಸಾಯದ ಜತೆ ಮನೆಗೆ ಬೇಕಾದ ಕಾಳು-ಕಡಿ ಎಲ್ಲವನ್ನೂ ಬೆಳೆದುಕೊಳ್ಳುತ್ತಾರೆ. ಸಾವಯವ ಗ್ರಾಮ ಯೋಜನೆಯಲ್ಲಿ ದಂಪತಿಗಬ್ಬರೂ ಸಕ್ರಿಯವಾಗಿ ಪಾಲ್ಗೊಂಡು ಎಲ್ಲಾ ಸೌಲಭ್ಯಗಳನ್ನೂ ಅಳವಡಿಸಿಕೊಂಡಿದ್ದಾರೆ. ಈ ಯೋಜನೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡಿರುವುದರಿಂದ ಅವರಿಗೆ ಅತ್ಯಂತ ಕಡಿಮೆ ಅವಧಿಯಲ್ಲಿಯೇ ಉತ್ತಮ ಸಾಧನೆ ಮಾಡಲು ಸಾಧ್ಯವಾಗಿದೆ. ಕೇವಲ ಯೋಜನೆಯಲ್ಲಿರುವ ಅಂಶಗಳಲ್ಲದೆ ತಾವೇ ಸ್ವತಃ ಅನೇಕ ವಿಧಾನಗಳನ್ನು ಅಳವಡಿಸಿಕೊಡಿರುವುದು ಇವರ ವಿಶೇಷ.

20 ಗುಂಟೆಯಲ್ಲಿ ಸೇವಂತಿಗೆ ಬೆಳೆಯುತ್ತಾರೆ. ಮೊದಲಿನಿಂದಲೂ ಹೂವಿನ ಕೃಷಿ ಮಾಡುತ್ತಿರುವ ಇವರು ರಸಗೊಬ್ಬರ ಬಳಸುತ್ತಿದ್ದರು. ಆರಂಭದಲ್ಲಿ ಸಮಸ್ಯೆ ಇರಲಿಲ್ಲ. ಕ್ರಮೇಣ ಸೇವಂತಿಗೆಗೆ ಗೆಡ್ಡೆ ರೋಗ ಮತ್ತು ಕಾಂಡ ಕೊಳೆಯುವ ರೋಗಗಳು ಶುರುವಾದವು. ಈ ರೋಗ ಬಂದರೆ ಎಲೆಗಳೆಲ್ಲಾ ಕೆಂಪಾಗಿ 8 ದಿವಸಕ್ಕೆಲ್ಲಾ ಇಡೀ ತೋಟ ಹಾಳಾಗುತ್ತಿತ್ತು. ಸಾಮಾನ್ಯವಾಗಿ ಮೊಗ್ಗು ಬಿಡುವ ಹಂತದಲ್ಲಿ ಈ ರೋಗ ಕಾಡುತ್ತಿತ್ತು.

ಸಾವಯವ ಯೋಜನೆ ಬಂದ ನಂತರ ಎರೆಗೊಬ್ಬರ ಉತ್ಪಾದಿಸಿ ಮೊದಲು ಅದನ್ನು ಹೂವಿನ ತೋಟಕ್ಕೆ ಬಳಸಿದರು. ಒಂದು ಗಿಡಕ್ಕೆ ತಲಾ 2 ಕೇಜಿಯಂತೆ ಎರೆಗೊಬ್ಬರ ಹಾಕಿ ಕಾಲ-ಕಾಲಕ್ಕೆ ನೀರು ಹಾಯಿಸಿದರು. ಆಶ್ಚರ್ಯವೆಂಬಂತೆ ಈ ಸಲ ಸೇವಂತಿಗೆಗೆ ಯಾವುದೇ ರೋಗ ಬರಲಿಲ್ಲ. ಇದು ಸಾಧ್ಯವಾಗಿರುವುದು ಎರೆಗೊಬ್ಬರ ಹಾಕಿದ್ದರಿಂದಲೇ ಎಂಬುದು ಇವರ ದೃಢ ವಿಶ್ವಾಸ. ಅಲ್ಲದೆ ಅಲ್ಪ-ಸ್ವಲ್ಪ ರೋಗ ಕಂಡರೆ ಗಂಜಲ ಮತ್ತು ಬೇವಿನ ಬೀಜದ ಕಷಾಯ ತಯಾರಿಸಿ ಹೊಡೆಯುತ್ತಾರೆ. ಉಳಿದ ಬೆಳೆಗಳಿಗೂ ಬಳಸುವುದುಂಟು.

ಸೇವಂತಿಗೆಗೆ ಎರೆಗೊಬ್ಬರ ಹಾಕಿ ಯಶಸ್ವಿಯಾದ ನಂತರ ಇವರು ಈ ಮುಂಗಾರಿನಲ್ಲಿ ಅರ್ಧ ಎಕರೆಗೆ ಹೆಸರು ಕಾಳು ಮತ್ತು ಎಳ್ಳನ್ನು ಬಿತ್ತಿ ಅದಕ್ಕೂ ಸಹ ಸಂಪೂರ್ಣ ಎರೆಗೊಬ್ಬರವನ್ನೇ ಬಳಸಿದ್ದಾರೆ. ರಸಗೊಬ್ಬರ ಹಾಕಿದಾಗಿನ ಬೆಳವಣಿಗೆಗೂ ಈಗ ಎರೆಗೊಬ್ಬರ ಹಾಕಿ ಬೆಳೆದಿರುವುದಕ್ಕೂ ಏನೇನೂ ವ್ಯತ್ಯಾಸವಿಲ್ಲ, ಈಗ ಇನ್ನೂ ಚೆನ್ನಾಗೇ ಬೆಳೆದಿದೆ ಎನ್ನುತ್ತಾರೆ ಬೋರಪ್ಪ. ಎರೆಗೊಬ್ಬರ ಹಾಕಿರುವುದರಿಂದ ನಾಲ್ಕು ದಿನ ಮಳೆ ತಡವಾದರೂ ಸಹ ತಡೆದುಕೊಳ್ಳುತ್ತದೆ ಎಂಬುದು ಇವರ ಅನುಭವ.

700 ಅಡಿಕೆ ಮರಗಳಿದ್ದು ಅವುಗಳಿಗೂ ಸಹ ಒಂದು ಗಿಡಕ್ಕೆ ಒಂದು ಕೇಜಿಯಂತೆ ಎರೆಗೊಬ್ಬರ ಬಳಸುತ್ತಿದ್ದಾರೆ. ಜೀವಾಮೃತ ಬಳಸುತ್ತಿದ್ದು ಅದರ ಪರಿಣಾಮವೂ ಸಹ ಉತ್ತಮವಾಗಿದೆ. ತೋಟದಲ್ಲಿಯೇ ಗುಂಡಿ ಮಾಡಿ ಜೀವಾಮೃತ ತಯಾರಿಸಿಕೊಂಡು ಬಳಸುತ್ತಾರೆ. ಇದರಿಂದ ಅಡಿಕೆಯಲ್ಲಿ ಕಾಯಿ ಉದುರುವಿಕೆ ನಿಂತಿದೆ.



ಹಾಗೆ ಮಾಡದೆ ಗೊಬ್ಬರದ ಗುಂಡಿಗೆ ಹಾಕುತ್ತಾರೆ ಮತ್ತು ತೋಟಗಳಲ್ಲಿ ಗಿಡಗಳ ಬುಡಕ್ಕೆ ಮುಚ್ಚಿಗೆಯಾಗಿ ಬಳಸುವ ಪರಿಪಾಠ ಬೆಳೆಸಿ ಕೊಂಡಿದ್ದಾರೆ.

ಆರ್ಡರ್ ಸಂಸ್ಥೆಯ ನಿರ್ದೇಶಕರಾದ ಜಿ.ವಿ.ರಘುರವರ ಪ್ರಕಾರ ವಿ.ಮಲ್ಲೇನಹಳ್ಳಿಯಲ್ಲಿ ಮನೆಯ ಮುಂದೆ ಕೈತೋಟ ಬೆಳೆಸುವ ಪದ್ಧತಿ ಜನಪ್ರಿಯ. "ಯಾರ ಮನೆಯ ಮುಂದೆ ನೋಡಲಿ ಸೀತಾಫಲ, ರಾಮಫಲ, ಪರಂಗಿ, ಬಹುವಾರ್ಷಿಕ ಬದನೆ, ಬಾಳೆ, ವಿವಿಧ ಹೂವಿನ ಗಿಡಗಳು ಇತ್ಯಾದಿ ಅನೇಕ ಗಿಡಗಳನ್ನು ಕಾಣಬಹುದು. ಇದನ್ನು ಪ್ರೋತ್ಸಾಹಿಸುವ ಹಾಕಿಕೊಂಡಿದ್ದಾರೆ.

ಹಳ್ಳಿಯಲ್ಲಿ ಕ್ಷೇತ್ರೋತ್ಸವ ಜರಗಿದ ಸಂದರ್ಭದಲ್ಲಿ ರೈತರು ತಾವೇ ಸಾವಯವ ವಿಧಾನದಲ್ಲಿ ಬೆಳೆದ ರಾಗಿ, ತೊಗರಿ, ಭತ್ತ, ನಿಂಬೆ, ತೆಂಗು, ಬಾಳೆ, ಅಡಿಕೆ ಹಾಗೂ ವಿವಿಧ ರೀತಿಯ ಸಾವಯವ ಗೊಬ್ಬರಗಳ ಪ್ರಾತ್ಯಕ್ಷಿಕೆಗಳನ್ನು ಮಾಡಿದ್ದರು. ಇವರ ಅನುಭವಗಳನ್ನು ಕೃಷಿ ಅಧಿಕಾರಿಗಳೂ, ಕೊನೆಹಳ್ಳಿ ಕೃಷಿ ವಿಜ್ಞಾನ ಕೇಂದ್ರದವರೂ, ಆರ್ಡರ್ ಸಂಸ್ಥೆಯವರೂ ತಿಳಿದುಕೊಂಡರು. ಸುತ್ತಮುತ್ತಲಿನ ಐದಾರು ಗ್ರಾಮಗಳ ಕೃಷಿಕರು ಕ್ಷೇತ್ರೋತ್ಸವದಲ್ಲಿ ಪಾಲ್ಗೊಂಡು ಮಾಹಿತಿ ಪಡೆದುಕೊಂಡರು.

ಕೃಷಿ ಇಲಾಖೆ ವತಿಯಿಂದ ತಿಪಟೂರಿನಲ್ಲಿ ನಡೆದ 'ಮುಂಗಾರು ಬೆಳೆ ಆಂದೋಲನ' ವಸ್ತು ಪ್ರದರ್ಶನದಲ್ಲಿ ಸಮಿತಿಯು ಪಾಲೊಂಡು ಎಲ್ಲರ ಪ್ರಶಂಸೆಗೆ ಪಾತ್ರವಾಗಿತ್ತು. ಸಾವಯವದಲ್ಲಿ ಬೆಳೆದ ಪದಾರ್ಥಗಳನ್ನೆಲ್ಲಾ ಪ್ರದರ್ಶನಕ್ಕಿಟ್ಟಿದ್ದರು. ಪ್ರದರ್ಶನಕ್ಕೆ ಬಂದವರೆಲ್ಲರೂ ನಮ್ಮ ಸ್ಟಾಲ್‌ಗೆ ಭೇಟಿ ನೀಡಿದ್ದರು ಎನ್ನುತ್ತಾರೆ ಸಮಿತಿಯ ಅಧ್ಯಕ್ಷರಾದ ಬಸವರಾಜು.



## ಚೆಂದದ ಶೀರ್ಷಿಕೆ ಕೊಡಿ

ಈ ಫೋಟೋಕ್ಕೆ ಐದು ಶಬ್ದಗಳಿಗೆ ಮೀರದಂತೆ ಚೆಂದದ ಶೀರ್ಷಿಕೆ ಕೊಡಿ. ಅತ್ಯುತ್ತಮ ಐದು ಶೀರ್ಷಿಕೆಗಳನ್ನು, ಅವನ್ನು ಕಳುಹಿಸಿದವರ ಹೆಸರುಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಫೋಟೋ: ಶ್ರೀಪಡ್ರೆ



## ಮಂಗನಿಗೇ ಬ್ಲೇಡು!

ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ಕುಳಿಮನೆಯ ಗಪ್ಪಣ್ಣ ಹೆಗಡೆ ತೋಟದಲ್ಲಿ ಹಾಗೂ ಪಕ್ಕದ ತೋಟಗಳಲ್ಲಿ ಎಲ್ಲ ಬಾಳೆಗೊನೆ ಮಂಗಗಳ ಪಾಲು. ಕರಿ ಮತ್ತು ಕೆಂಪು ಮೂತಿಯ ಮಂಗಗಳು ಅಡಿಕೆ, ತೆಂಗು, ಹಲಸು ಎಲ್ಲವನ್ನೂ ಭೇದಭಾವವಿಲ್ಲದೆ ತಿನ್ನುತ್ತವೆ. ಆದರೆ, ಗಪ್ಪಣ್ಣನ ತೋಟದ ಮೂರು ಬಾಳೆಗೊನೆಯ ಒಂದು ಕಾಯನ್ನೂ ಮುಟ್ಟಿಲ್ಲ. ಹಾಗೆ ನೋಡಿದರೆ, ಇವಕ್ಕೆ ಚೀಲ ವಗೈರೆಯನ್ನೂ ಕಟ್ಟಿಲ್ಲ. ಹೀಗಿದ್ದರೂ ಮಂಗಗಳು ದೂರ ಉಳಿದಿದ್ದು ಹೇಗೆ?

ಗಪ್ಪಣ್ಣ ಅನುಸರಿಸಿದ ವಿಧಾನ ತುಂಬ ಸರಳ. ಮುಖಕ್ಷೌರ ಮಾಡಿಕೊಳ್ಳಲು ಬಳಸುವ ರೇಜರ್ ಬ್ಲೇಡನ್ನು ಮಧ್ಯೆ ಮುರಿದು ಎರಡು ತುಂಬು ಮಾಡಿ. ಬಾಳೆ ಗೊನೆ ಮರದಿಂದ ಹೊರಟು ಕಾಯಿ ಬಿಡುವವರೆಗೆ ಬಾಗಿದ ದಪ್ಪ ದಿಂಡು ಇರುತ್ತದೆ ತಾನೆ? ಹಾಗೆ ಬಾಗಿದ ದಿಂಡನ್ನು ಮೇಲ್ಭಾಗದಲ್ಲಿ ಎರಡು ಇಂಚು ಉದ್ದಕ್ಕೆ ಸೀಳಿ, ಎರಡು ಸಾಲಿನಲ್ಲಿ ಎರಡೆರಡು ತುಂಡು ಬ್ಲೇಡುಗಳನ್ನು ಅಂಚು ಮಾತ್ರ ಮೇಲೆ ಇರುವಂತೆ ಹುದುಗಿಸಬೇಕು. ಹೀಗೆ ಹುದುಗಿಸಲು ಬೆರಳಿಗೆ ದಪ್ಪ ಬಟ್ಟೆ ಸುತ್ತಿಕೊಂಡು ಒತ್ತಬೇಕು. ದಿಂಡು ಜಿಗುಟಾಗಿದ್ದು, ಒತ್ತುವಾಗ ಸ್ವಲ್ಪ ಹೆಚ್ಚು ಕಡಿಮೆಯಾದರೆ, ಕೈಗೆ ಗಾಯ ಖಚಿತ.

ಹೀಗೆ ಹುದುಗಿಸಲು ಹೊಸ ಬ್ಲೇಡೇ ಆಗಬೇಕು. ಅಂದರೆ, ಇಡೀ ಗೊನೆ ಬೆಳೆಯುವವರೆಗೆ ಅದಕ್ಕೆ ತುಕ್ಕು ಹಿಡಿಯುವುದಿಲ್ಲ. ಒಂದು ಗೊನೆಗೆ ಎರಡು ಪೂರ್ತಿ ಬ್ಲೇಡುಗಳು, ಅಂದರೆ ನಾಲ್ಕು ತುಂಡುಗಳು ಸಾಕು.

ತತ್ವ: ಮಂಗ ಬಾಳೆಗೊನೆಯ ಈ ಬಾಗಿದ ದಿಂಡಿನ ಮೇಲೆ ಕೂತು ಕಾಯಿ ತಿನ್ನುವುದು ವಾಡಿಕೆ. ಮರ ಏರುವಾಗ, ಆ ದಿಂಡನ್ನೇ ಹಿಡಿದು ಜೋತು ಬಿದ್ದು ಮೇಲೆ ಏರುತ್ತದೆ. ಈಗ ಬ್ಲೇಡ್ ಹುದುಗಿಸಿದ್ದರಿಂದ ಮರ ಏರಲು ಹೋದಾಗ, ಅದರ ಕೈಗೆ ಗಾಯವಾಗುತ್ತದೆ. ಒಮ್ಮೆ ಒಂದು ಮಂಗನ ಕೈ ಸೀಳಿ ರಕ್ತ ಬಂದರೆ ಸಾಕು, ಬೇರೆ ಯಾವ ಮಂಗವೂ ಅತ್ತ ಸುಳಿಯುವುದಿಲ್ಲ. ಎಲ್ಲವೂ ಗಾಬರಿಯಿಂದ ಪಲಾಯನ ಮಾಡುತ್ತವೆ. ಮರದಲ್ಲಿ ಬ್ಲೇಡು ಇರುವವರೆಗೆ ಮಂಗ ಹತ್ತಿರ ಬಂದರೆ ಕೇಳಿ.


(ಕೃಪೆ: ಅಡಿಕೆ ಪತ್ರಿಕೆ)

ಎಂ ಎಸ್ ಹೆಬ್ಬಾರರ

# ನಿಸರ್ಗ ನೋಟ









# ಬೈಬೈ ಎಂಡೋಸಲ್ಫಾನ್

**ಪಡ್ರೆ ದುರಂತ ನೆನಪಿದೆಯೆ? ದಶಕಗಳ ಕಾಲ ಹೆಲಿಕಾಪ್ಟರಿನಿಂದ ಸಿಂಪಡಿಸಿದ ಮಹಾವಿಷ ಎಂಡೋಸಲ್ಫಾನಿನಿಂದಾಗಿ ಅಲ್ಲಿ ಈಗಲೂ ಜನ ಸಾಯುತ್ತಲೇ ಇದ್ದಾರೆ.**

ಇದೀಗ ಭೂಮಿಗೆ ಆ ವಿಷ ಉಣಿಸಿದ ಕಂಪನಿಯ ಭೀಕರ ಉತ್ಪಾದನೆ ತಡೆಯುವ ನಿಟ್ಟಿನಲ್ಲಿ ಎರಡು ಮಹತ್ವದ ಬೆಳವಣಿಗೆಗಳು ನಡೆದಿವೆ. ಒಂದು ಆಶಾದಾಯಕವಾಗಿದ್ದರೆ, ಇನ್ನೊಂದು ನಿರಾಶದಾಯಕ.

ಆಶಾದಾಯಕ ಬೆಳವಣಿಗೆ ಎಂದರೆ, ಕರಾವಳಿ ಕರ್ನಾಟಕ ಹಾಗೂ ಕೇರಳದ ಗೇರು ಬೆಳೆಗಾರರ ದುಃಸ್ವಪ್ನವಾದ ಎಂಡೋಸಲ್ಫಾನ್ ಕೀಟನಾಶಕ ವಿತರಣೆಯನ್ನು ಇನ್ನೊಂದು ವರ್ಷದಲ್ಲಿ, ಅಂದರೆ 2010ರಿಂದ ಸ್ಥಗಿತಗೊಳಿಸುವುದಾಗಿ ಅದರ ಉತ್ಪಾದಕ ಕಂಪನಿ ಬಾಯರ್ ಘೋಷಿಸಿದೆ. ಹಲವಾರು ವರ್ಷಗಳಿಂದ ಅಂತರಾಷ್ಟ್ರೀಯ ಮಟ್ಟದಲ್ಲಿ ಭಾರಿ ವಿವಾದ ಹಾಗೂ ಪ್ರತಿಭಟನೆಗೆ ಕಾರಣವಾಗಿದ್ದ ಎಂಡೋಸಲ್ಫಾನ್ ಉತ್ಪಾದನೆ, ವಿತರಣೆ ಮತ್ತು ಬಳಕೆಗೆ ಕೊನೆಗೂ ಕಡಿವಾಣ ಬೀಳಲಿದೆ.

ಹತ್ತಿ ಮತ್ತು ಗೇರು ಬೆಳೆಯಲ್ಲಿ ಕೀಟಗಳ ಬಾಧೆ ನಿಯಂತ್ರಣಕ್ಕೆ ಬಳಸಲಾಗುತ್ತಿರುವ ಈ ಅಪಾಯಕಾರಿ ಕೀಟನಾಶಕ ತನ್ನ ಭೀಕರ ಪರಿಣಾಮಗಳಿಗೆ ಕುಖ್ಯಾತ. ಈ ವಿಷದ ಸಂಪರ್ಕಕ್ಕೆ ಬಂದ ರೈತರು ಹಾಗೂ ಅವರ ಕುಟುಂಬಗಳು ತೀವ್ರ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗಿದ್ದಾರೆ. ಮಕ್ಕಳು ತೀವ್ರತರದ ಮನೋದೈಹಿಕ ಸಮಸ್ಯೆಗಳಿಗೆ ಸಿಲುಕಿವೆ. ತೀವ್ರ ಪ್ರಮಾಣದ ಬುದ್ಧಿಮಾಂದ್ಯತೆ ಹಾಗೂ ದೈಹಿಕ ಆರೋಗ್ಯ ಸಮಸ್ಯೆಗಳು ಒಂದಿಡೀ ತಲೆಮಾರನ್ನೇ ದುಃಸ್ಥಿತಿಗೆ ತಳ್ಳಿವೆ. ಪ್ರಾದೇಶಿಕ ಭೇದವಿಲ್ಲದೇ ಎಲ್ಲೆಡೆ ತನ್ನ ವಿನಾಶಕಾರಿ ಪರಿಣಾಮ ಬೀರುತ್ತಿರುವ ಎಂಡೋಸಲ್ಫಾನ್ ಉತ್ಪಾದನೆ ಹಾಗೂ ವಿತರಣೆ ನಿಷೇಧಿಸಲು ಅಂತರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಸಂಸ್ಥೆಗಳು ತೀವ್ರ ಒತ್ತಡ ಹೇರಿದ್ದವು.

ಪ್ರಮುಖ ಬೆಳವಣಿಗೆಯೊಂದರಲ್ಲಿ, ಅಂಡರ್ವೇರ್ ಚಳುವಳಿ ನಡೆಸಿದ ಎಂಡೋಸಲ್ಫಾನ್ ವಿರೋಧಿಗಳು, 16 ದೇಶಗಳ ರೈತರಿಂದ ಬಳಸಿದ ಕಾಚಗಳನ್ನು ಸಂಗ್ರಹಿಸಿದರು. ಅವಕ್ಕೆ ಬದಲಾಗಿ ನೈಸರ್ಗಿಕವಾಗಿ ಉತ್ಪಾದಿಸಿದ ಹತ್ತಿಯಿಂದ ತಯಾರಿಸಿದ ಕಾಚಗಳನ್ನು ನೀಡಿದರು. ನಂತರ, ಹಳೆಯ ಕಾಚಗಳನ್ನೆಲ್ಲ ಎಂಡೋಸಲ್ಫಾನ್ ಉತ್ಪಾದಿಸುವ ಬಾಯರ್ ಕಂಪನಿಯ ಕೇಂದ್ರ ಕಚೇರಿಗೆ ಕಳಿಸಿಕೊಟ್ಟರು.

ದಶಕಗಳ ಹೋರಾಟಕ್ಕೆ ತಾತ್ವಿಕ ಅಂತ್ಯ ಬಂದಿದ್ದು ಅಂಡರ್ವೇರ್ ಚಳುವಳಿ ಮೂಲಕ. ಕೊನೆಗೂ ತನ್ನ ಧೋರಣೆಯನ್ನು ಬದಲಾಯಿಸಿಕೊಂಡ ಬಾಯರ್ ಕಂಪನಿ, 2010ರಿಂದ ಎಂಡೋಸಲ್ಫಾನ್ ವಿತರಣೆ ನಿಲ್ಲಿಸುವುದಾಗಿ ಪ್ರಕಟಿಸಿತು.

ಆದರೆ, ನಿರಾಶದಾಯಕ ಬೆಳವಣಿಗೆ ಏನೆಂದರೆ, ಅಂತರಾಷ್ಟ್ರೀಯ ವೇದಿಕೆಗಳಲ್ಲಿ ಬಾಯರ್ ಕಂಪನಿಯ ಉತ್ಪಾದನೆ ವಿರುದ್ಧ ವಾದಿಸುವ ಭಾರತ ಸರ್ಕಾರ, ತನ್ನದೇ ಆಧೀನ ಸಂಸ್ಥೆಯಲ್ಲಿ ಎಂಡೋಸಲ್ಫಾನ್ ಉತ್ಪಾದನೆ ಮತ್ತು ವಿತರಣೆಯನ್ನು ಅಬಾಧಿತವಾಗಿ ಮುಂದುವರಿಸುತ್ತಿರುವುದು. ಕೇಂದ್ರ ಸರ್ಕಾರದ ಒಡೆತನದ ಹಿಂದುಸ್ತಾನ್ ಇನ್ಸೆಕ್ಟಿಸೈಡ್ಸ್ ಸಂಸ್ಥೆ ಎಂಡೋಸಲ್ಫಾನ್ ಅನ್ನು ಅಧಿಕೃತವಾಗಿಯೇ ಉತ್ಪಾದಿಸಿ, ವಿತರಿಸುತ್ತಿದೆ.

ತೊಟ್ಟಿಲನ್ನೂ ತೂಗುವ, ಮಗುವನ್ನೂ ಗಿಲ್ಲುವ ಭಾರತ ಸರ್ಕಾರದ ನೀತಿಯ ವಿರುದ್ಧ ಈಗ ಮುಂದಿನ ಪ್ರತಿಭಟನೆ ಕೇಂದ್ರೀಕೃತವಾಗಬೇಕಿದೆ.

(*ಕೃಪೆ:* ಡೌನ್ ಟು ಅರ್ಥ್) *ಅನುವಾದ:* ಚಾಮರಾಜ್

# ಕಣ್ಣುರೆಪ್ಪೆಯ ಕೂದಲು ಹಾಗೂ ಮುಳ್ಳೇ ಹಣ್ಣಿನ ಬೇರು

## ಮುಳ್ಳೇ ಹಣ್ಣು

ಶಿವಾನಂದ ಕಳವೆ

ಮಲೆನಾಡಿನ ನಮ್ಮ ಮನೆಗೆ ಬರುವ ಬಹುತೇಕ ನೆಂಟರಿಷ್ಟರು ಕಾಡು ದಾರಿಯಲ್ಲಿ ಬರುತ್ತಿದ್ದವರು. ಹೆಚ್ಚೆಂದರೆ ಬೈಸಿಕಲ್ಲು, ಎತ್ತಿನಗಾಡಿಗಳನ್ನು ಕೆಲವರು ತರುತ್ತಿದ್ದರು. ಅಪರೂಪಕ್ಕೆ ಬಸ್ಸಿಗೆ ಬಂದವರು ತಾವು ವಾಹನದಲ್ಲಿ ಬಂದವರೆಂದು ತೋರಿಸಲು ಟಿಕೆಟ್ ತರುತ್ತಿದ್ದರು, ಮನೆ ಜಗುಲಿಯಲ್ಲಿ ಕೂಡ್ರುತ್ತಿದ್ದಂತೆ ಬಸ್ಸಿನೊಳಗಿನ ಯಾವುದೋ ಘಟನೆಯನ್ನು ದೊಡ್ಡದಾಗಿ ವಿವರಿಸಲು ಶುರುಮಾಡುತ್ತಿದ್ದರು. ಆ ಪೇಟೆ ಮಾತುಕತೆಯನ್ನು ವಿಶೇಷವಾಗಿ ಕೇಳುತ್ತಿದ್ದೆವು. ಆದರೆ ಯಾವತ್ತೂ ಬಸ್ಸಿಗೆ ಬರುವ ನೆಂಟರಿಗಿಂತ ಕಾಡು ಗುಡ್ಡ ಇಳಿದು, ಹಳ್ಳ ದಾಟಿ ಬರುತ್ತಿದ್ದ ನೆಂಟರರೆಂದರೆ ನಮಗೆ ಹೆಚ್ಚು ಪ್ರೀತಿ. ಗದ್ದೆ ಬಯಲಿನಲ್ಲಿ ಕೈ ಬೀಸುತ್ತ ಅಷ್ಟು ದೂರದಿಂದ ನಡೆದು ಬರುತ್ತಿದ್ದ ರೀತಿ ನಮ್ಮೆದೆಯೊಳಗೆ ಸಂತಸ ಉಕ್ಕೇರಿಸುತ್ತಿತ್ತು. ಒಬ್ಬರೇ ಬಂದಿದ್ದಾರೋ, ಹೆಂಗಸರು ಬಂದಿದ್ದಾರೋ, ಮಕ್ಕಳು ಜತೆಗಿದ್ದಾರೋ ಎಂಬುದೆಲ್ಲ ದೂರದಿಂದ ಪತ್ತೆ ಹಚ್ಚಿ ಅಡುಗೆ ಮನೆಗೆ ವರದಿ ಒಪ್ಪಿಸುವ ಕೆಲಸ ನಮ್ಮದು. ಬರುವವರನ್ನು ಮಾತಾಡಿಸಲು ಮುಂಚಿತವಾಗಿ ಅಂಗಳಕ್ಕೆ ನೆಗೆದು ಸಂಭ್ರಮಿಸುತ್ತಿದ್ದೆವು. ಅವರು ಬಿಳಿ ಮುಳ್ಳೆ ಹಣ್ಣು, ಕರೆ ಮುಳ್ಳೆ ಹಣ್ಣು, ಬಿಕ್ಕೆ ಹಣ್ಣು ಹೀಗೆ ಅಡವಿ ರಸ್ತೆ ಪಕ್ಕ ಸಿಕ್ಕ ಕಾಡು ಹಣ್ಣು ತರುತ್ತಿದ್ದರು.

ಕಾಡು ಹಣ್ಣು ಅಷ್ಟು ಅಪರೂಪವಲ್ಲ, ಮಕ್ಕಳು ಕೊಯ್ದು ತಿನ್ನುವದನ್ನು ಹಿರಿಯರು ಮನೆಗೆ ತರುತ್ತಿರುವದು ವಿಚಿತ್ರವೆನಿಸಿತ್ತು ! ಹತ್ತಾರು ಕಿಲೋ ಮೀಟರ್ ಕಾಲ್ನಡಿಗೆಯಲ್ಲಿ ಬರುವಾಗ ಸುಸ್ತಾದವರು ಕಾಡು ಹಣ್ಣು ತಿನ್ನುತ್ತ ದಾರಿ ಸಾಗುತ್ತಿತ್ತು. ಕೊಯ್ದು ತಿನ್ನುವಾಗ ನೆಂಟರ ಮನೆಯ ನಮ್ಮಂತಹ ಮಕ್ಕಳ ನೆನಪಾಗಿ ಒಂದಿಷ್ಟನ್ನು ಎಲೆಗಳಲ್ಲಿ ಕಟ್ಟಿ ತರುತ್ತಿದ್ದರು. ರಜಾ ದಿನಗಳಲ್ಲಿ ಹೊಳೆ ಸ್ನಾನಕ್ಕೆ ಹೊರಟಾಗ, ಕಾಡು ಅಲೆಯಲು ಓಡಿದಾಗ ಹಿರಿಯರು ಮುಖ ಮುಸುಡಿ ನೋಡದೇ ಬಯ್ಯುವದು ಮಾಮೂಲಿ. ಆಗ ಮನೆಗೆಲಸ, ಓದು ಮರೆತು ಕಾಡುಹಣ್ಣು ಕೊಯ್ಯುತ್ತ ಕಾಲಹರಣ ಮಾಡುತ್ತೇವೆಂಬುದು ಎಲ್ಲರ ಸಿಟ್ಟು. ನಾವು ಗುಡ್ಡ ಬೆಟ್ಟ ಅಲೆದು ಕೊಯ್ದು ತರುತ್ತಿದ್ದ ಫಲಗಳನ್ನು ಈಗ ಮನೆಗೆ ಬಂದ ನೆಂಟರೂ ತರುತ್ತಾರೆಂದರೆ ನಮಗೆ ಎಲ್ಲಿಲ್ಲದ ಖುಷಿಯಾಗುತ್ತಿತ್ತು.

'ಮುಳ್ಳೇ ಹಣ್ಣು ಮಕ್ಕಳಿಗೆ ಎಂತಕ್ಕೆ? ರಜೆಯಲ್ಲಿ ದಿನವಿಡೀ ಅದನ್ನೇ ತಿನ್ತಾರೆ!' ಎಂದು ಎತ್ತರದ ಧ್ವನಿ ತೆಗೆಯುವ ನಮ್ಮ ಹಿರಿಯರು ತಮ್ಮ ಕವಳದ ಬಾಯಲ್ಲಿ ಹಣ್ಣು ಮೆಲ್ಲುವ ಯತ್ನ ನಡೆಸುತ್ತಿದ್ದರು. ಅಡಿಕೆ–ತಂಬಾಕಿನ ಭರ್ಜರಿ ಕಿಟ್ಟು ತುಂಬಿ ಕಿಲುಬುಗೆಟ್ಟಿದ್ದ ಅವರ ಬಾಯಲ್ಲಿ ಕಾಡು ಹಣ್ಣಿನ ರುಚಿ ಬಹುಶಃ ಕುಲಗೆಡುತ್ತಿತ್ತು. ಕಾಡು ಹಣ್ಣು ನೆಂಟರು ತಂದದ್ದು ಎಂಬ ಕಾರಣಕ್ಕೆ ಅವರನ್ನು ಖುಷಿ ಪಡಿಸಲು ಆ ಹಣ್ಣಿಗೆ ಅವರು ಬಾಯಿ ಹಾಕುತ್ತಿದ್ದರು, ನಮ್ಮ ಪಾಲು ಕಬಳಿಸುತ್ತಿದ್ದರು. ಇದೇ ಸಮಯ ಅರಿತು ಅವರನ್ನು ಮೆಚ್ಚಿಸಲು ಇನ್ನಷ್ಟು ಹಣ್ಣುಗಳನ್ನು ಒತ್ತಾಯದಿಂದ ಹಿರಿಯರಿಗೆ ಹಂಚುತ್ತಿದ್ದೆವು.


'ಮಧ್ಯಾಹ್ನ ಮುಳ್ಳೆ ಹಣ್ಣು ಕೊಯ್ಯಲು ಕಾಡಿಗೆ ಹೋಗೋಣ' ಎಲ್ಲ ಹಿರಿಯರೆದುರು ನೆಂಟರ ಜತೆ ಬಂದ ಮಕ್ಕಳಿಗೆ ಬುಲಾವ್ ನೀಡುವದು ಅವತ್ತಿನ ನಮ್ಮ ಲಾಗಾಯ್ತಿನ ಕ್ರಮ. ಯಾವತ್ತೂ ಬೈಯ್ಯುವ ಹಿರಿಯರು ಈಗ ಇಂತಹ ದಿಕ್ಕಿಗೆ ಹಣ್ಣು ಕೊಯ್ಯಲು ಹೋಗಿ ಎಂದು ಸಲಹೆ ನೀಡುತ್ತಿದ್ದರು. ಅದು ನಮಗೆ ಸಿಕ್ಕ ದೊಡ್ಡ ಪ್ರೋತ್ಸಾಹ ! ಉರಿ ಬಿಸಿಲು ಲೆಕ್ಕಿಸದೇ, ಸುರಿವ ಮಳೆಗೆ ಅಂಜದೇ, ಕೈ ಕಾಲು ಚುಚ್ಚುವ ಕಾರೇ,ಗೊಣಗಲು ಮುಳ್ಳಿಗೆ ಹೆದರದೇ ಅಡವಿ ಸಂಚಾರ ಆರಂಭವಾಗುತ್ತಿತ್ತು. ಪುಟ್ಟ ಮುಳ್ಳೆ ಹಣ್ಣು ರುಚಿ ಮಾತ್ರದಲ್ಲಿ ಸೆಳೆದು ಊರ ಮಕ್ಕಳನ್ನು ಒಟ್ಟುಗೂಡಿಸಿ ಅಡವಿ ಜ್ಞಾನ ಹಂಚಿದ್ದು ಇವತ್ತಿಗೂ ಮರೆಯಲಾಗುತ್ತಿಲ್ಲ!. ಚಾಕಲೇಟ್, ಪಾನಿಪೂರಿ, ಗೋಬಿ ಮಂಚೂರಿಗಳು ಇಂದಿನ ಮಕ್ಕಳನ್ನು ಸೆಳೆಯುವಂತೆ ಮುಳ್ಳು ಗಿಡದ ಕಾಡು ಹಣ್ಣು ಅಕ್ಕರೆಯಲ್ಲಿ ಹಿಡಿದಿಟ್ಟು ಬೆಟ್ಟದ ಜೀವವಾಗಿ ನಮ್ಮನ್ನು ಪರಿವರ್ತಿಸಿತು.



ಕಾಡು ಅಲೆಯುವ ಮಕ್ಕಳು ಚಪ್ಪಲಿ ಹಾಕುತ್ತಿರಲಿಲ್ಲ, ಚಪ್ಪಲಿ ಹಾಕುತ್ತಿರಲಿಲ್ಲ ಎನ್ನುವದಕ್ಕಿಂತ ಅದು ಪೇಟೆಗೆ ಹೋಗುವವರು ಮಾತ್ರ ಧರಿಸುವದೆಂದು ಹಿರಿಯರು ಭಾವಿಸಿದ್ದರು. ಹಳ್ಳಿ ಮೂಲೆಯಲ್ಲಿ ಅಡ್ಡಾಡುವವರಿಗೆ ಚಪ್ಪಲಿ ಅಗತ್ಯದ ಬಗೆಗೆ ಯಾರಿಗೂ ಲಕ್ಷ್ಯವಿರಲಿಲ್ಲ. ಅದೊಂದು ಪ್ಯಾಷನ್ ಎಂದೇ ಭಾವಿಸಿದಂತಿತ್ತು. ನಮಗೆ ಹೊಸದಾಗಿ ಚಪ್ಪಲಿ ಹಾಕಿದಾಗ ಅದು ಕಾಲು ಬೆರಳು, ಹಿಮ್ಮಡಕ್ಕೆ ಗಾಯ ಮಾಡುತ್ತಿತ್ತು. ಮುಳ್ಳಿನ ಗಾಯಕ್ಕಿಂತ ಚಪ್ಪಲಿ ಗಾಯವೇ ದೊಡ್ಡ ಸಮಸ್ಯೆಯಂತೆ ಕಾಣುತ್ತಿತ್ತು. ಕಾಲಿಗೆ ಮುಳ್ಳು ನಾಟಿ ಕೀವು ತುಂಬಿದಾಗ ಉಡುದಾರಕ್ಕೆ ಸದಾ ಇರುತ್ತಿದ್ದ ಪಿನ್ನು ನಮಗಿರುವ ಏಕೈಕ ಅಸ್ತ್ರ !

ಮುಳ್ಳು ಹೊಕ್ಕ ಜಾಗಕ್ಕೆ ಕೆಸವಿನ ದಂಟಿನ ನೀರು ಹಚ್ಚುತ್ತ ನಿಧಾನಕ್ಕೆ ಮುಳ್ಳು ತೆಗೆಯುವ ಶಸ್ತ್ರ ಚಿಕಿತ್ಸೆ ಮಾಡುವುದರಲ್ಲಿ ಪಳಗಿದ್ದೆವು, ಹಸಿ ಮರ ನೋಡುತ್ತಿದ್ದರೆ ಮುಳ್ಳು ತೆಗೆಯುವಾಗ ಉರಿಯಾಗುವುದಿಲ್ಲವೆಂದು ಹಿರಿಯರು ಹೇಳಿದ್ದನ್ನೇ ನಂಬಿ ಅನುಸರಿಸುತ್ತಿದ್ದೆವು.

ಕಾಲಿನ ಈಚೆಗೆ ಹೊರ ಬಂದ ಮುಳ್ಳನ್ನು ಹಾಗೇ ಬಿಸಾಕುವ ಪದ್ಧತಿ ನಮ್ಮದಲ್ಲ. ಕಣ್ಣುರೆಪ್ಪೆಯ ಕೂದಲು ಕಿತ್ತು ಮುಳ್ಳಿನ ಬುಡಕ್ಕೆ ಹಿಡಿದು ಕಳ್ಳ ಮುಳ್ಳೋ, ಸುಳ್ಳು ಮುಳ್ಳೋ ಎಂದು ಸೋಜಿಗದ ಪರೀಕ್ಷೆ ಮಾಡುತ್ತಿದ್ದೆವು. ಕೂದಲಿನ ಬುಡಕ್ಕೆ ಅಂಟದೇ ಜಾರಿದರೆ ಕಳ್ಳಮುಳ್ಳೆಂದೂ, ಅಂಟಿ ಹಿಡಿದುಕೊಂಡರೆ ಸುಳ್ಳು ಮುಳ್ಳೆಂದೂ ಹಿರಿಯರು ನಮಗೆ ಪಾಠ ಹೇಳಿದ್ದರು!



ಅಷ್ಟಕ್ಕೂ ಕಾಡು ಮುಳ್ಳಿನ ಬಗೆಗೆ ಇಂತಹುದೊಂದು ಪರೀಕ್ಷೆ ಏಕೆಂದು ಗೊತ್ತಿರಲಿಲ್ಲ, ಆದರೂ ಮುಳ್ಳು ತೆಗೆದ ಬಳಿಕ ಕಣ್ಣಿನ ರೆಪ್ಪೆಯ ಒಂದು ಕೂದಲು ಹರಿದು ಪರೀಕ್ಷೆಗೆ ಒಳಪಡಿಸುವ ಕೆಲಸವನ್ನಂತೂ ತಪ್ಪದೇ ಮಾಡುತ್ತಿದ್ದೆವು.

**ಕಣ್ಣುರೆಪ್ಪೆಯ ಕೂದಲು ಕಿತ್ತು ಮುಳ್ಳಿನ ಬುಡಕ್ಕೆ ಹಿಡಿದು ಕಳ್ಳ ಮುಳ್ಳೋ, ಸುಳ್ಳು ಮುಳ್ಳೋ ಎಂದು ಪರೀಕ್ಷೆ ಮಾಡುತ್ತಿದ್ದೆವು.**

ಅಂದು ಊರ ಮಕ್ಕಳು, ನೆಂಟರಿಷ್ಟರ ದಂಡು ಕಟ್ಟಿಕೊಂಡು ಮುಳ್ಳೇ ಹಣ್ಣು ಕೊಯ್ಯುತ್ತ ಅಡ್ಡಾಡಿದ ನೆಲೆಗಳು ಈಗ ಅಕೇಸಿಯಾ ತೋಟಗಳಾಗಿವೆ. ಇಲ್ಲಿ ಅಡ್ಡಾಡುವಾಗ ಕಾಲಿಗೆ ನಾಟಿದ ಪುಟ್ಟ ಮುಳ್ಳನ್ನೂ ನಾವು ಕಣ್ಣುರೆಪ್ಪೆಯ ಕೂದಲು ಕಿತ್ತು ಪರೀಕ್ಷಿಸುತ್ತಿದ್ದೆವು!

ಆದರೆ ಈಗ ಇಲ್ಲಿ ಅಕೇಸಿಯಾ ನೆಡಲು ಬಂದ ದೈತ್ಯ ಬುಲ್ಡೋಜರ್ ಮಾತ್ರ ಯಾವುದನ್ನೂ ನೋಡದೆ ಕಣ್ಮುಚ್ಚಿ ಬೇರು ಸಹಿತ ನಮ್ಮ ಹಣ್ಣಿನ ಗಿಡಗಳನ್ನು ಕಿತ್ತೆಸೆಯಿತು!


## ಬೇಯುತಿದೆ ಭೂಮಿ

ಭೂಮಿ ಬಿಸಿಯಾಗುತ್ತಿದೆ ಎಂಬುದಕ್ಕೆ ಹೊಸ ಸಾಕ್ಷ್ಯ ಅಮೆರಿಕದಿಂದ ಬಂದಿದೆ.

ಜಗತ್ತಿನ ಶೇಕಡಾ 5 ಜನಸಂಖ್ಯೆ ಹೊಂದಿರುವ ಅಮೆರಿಕ, ಶೇಕಡಾ 25ರಷ್ಟು ತ್ಯಾಜ್ಯ ಉಂಟು ಮಾಡುತ್ತದೆ. ಅದರಲ್ಲೂ ದ್ರವ ಇಂಧನ ಉರಿಯುವುದರಿಂದ ಉಂಟಾಗುವ ಕಾರ್ಬನ್ ಡೈಆಕ್ಸೈಡ್ ಉಂಟುಮಾಡುವ ಅಡ್ಡಪರಿಣಾಮಗಳು ಒಂದೆರಡಲ್ಲ. ಸೂರ್ಯನ ಕಿರಣಗಳಿಂದ ಉತ್ಪತ್ತಿಯಾಗುವ ಬಿಸಿ ಭೂಮೇಲ್ಮೈಯಿಂದ ಆಚೆ ಹೋಗಲು ವಾತಾವರಣದಲ್ಲಿರುವ ಕಾರ್ಬನ್ ಡೈ ಆಕ್ಸೈಡ್ ಅಡ್ಡಿ ಮಾಡುತ್ತವೆ. ಇದರ ಪರಿಣಾಮವಾಗಿ, ಭೂಮಿಯ ಮೇಲ್ಮೈ ಉಷ್ಣಾಂಶದಲ್ಲಿ ಏರಿಕೆಯಾಗುತ್ತಿದೆ.

ಇದನ್ನು ಸಮರ್ಥವಾಗಿ ಬಿಂಬಿಸುವ ಸಾವಿರಾರು ಫೋಟೊಗಳನ್ನು ಅಮೆರಿಕದ ಬೇಹುಗಾರಿಕಾ ಉಪಗ್ರಹಗಳು ತೆಗೆದಿದ್ದವು. ಆದರೆ, ಚುನಾವಣೆಯಲ್ಲಿ ಈ ಅಂಶ ತಮ್ಮ ಪಕ್ಷಕ್ಕೆ ಹಿನ್ನಡೆ ಉಂಟುಮಾಡಬಹುದು ಎಂಬ ಅಳುಕಿನಿಂದ ಹಿಂದಿನ ಅಧ್ಯಕ್ಷ ಜಾರ್ಜ್ ಡಬ್ಲ್ಯು. ಬುಷ್ 'ರಾಷ್ಟ್ರೀಯ ರಹಸ್ಯ' ವಿಭಾಗದಡಿ ಸೇರಿಸುವ ಮೂಲಕ ಅವು ಬಹಿರಂಗವಾಗದಂತೆ ತಡೆದಿದ್ದರು.

ಈಗ ಹೊಸ ಅಧ್ಯಕ್ಷ ಬರಾಕ್ ಒಬಾಮಾ ಅವನ್ನು ಮುಕ್ತಗೊಳಿಸಿದ್ದಾರೆ. ಈ ಚಿತ್ರಗಳ ಪೈಕಿ, ಅಮೆರಿಕದ ಅಲಾಸ್ಕಾ ಪ್ರಾಂತ್ಯದ ಬ್ಯಾರೊ ಬಂದರಿನ ಚಿತ್ರ ಉಷ್ಣಾಂಶ ಏರಿಕೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಬಿಂಬಿಸಿದೆ.




ಜುಲೈ 2006ರಲ್ಲಿ ಹಿಮಾಚ್ಛಾದಿತವಾಗಿದ್ದ ಬ್ಯಾರೊ ಬಂದರು, ಕೇವಲ ಒಂದೇ ವರ್ಷದಲ್ಲಿ ಹಿಮ ಕಳೆದುಕೊಂಡಿದೆ. ಇದು ಹೇಗೆಂದರೆ, ಸದಾ ಹಿಮದಿಂದ ತುಂಬಿರುವ ಹಿಮಾಲಯ ಪರ್ವತದ ಶೃಂಗಗಳು ಹಿಮ ಕರಗಿಸಿಕೊಂಡು ನಿಂತಂತೆ.

ಪರಿಸ್ಥಿತಿ ನಿಜಕ್ಕೂ ಕಳವಳಕಾರಿಯಾಗಿದೆ ಎಂಬುದಕ್ಕೆ ಈ ಚಿತ್ರಗಳೇ ಸಾಕ್ಷಿ.

(ಕೃಪೆ: ಗೋಬರ್ ಟೈಮ್ಸ್)


# ಕಲಿತದ್ದೆಲ್ಲಾ ಮರೆಯಬೇಕು

ಕಲಿತದ್ದೆಲ್ಲಾ ಮರೆಯಬೇಕು– ಇದು ಈ ಪುಸ್ತಕದ ಮೊದಲ ಅಧ್ಯಾಯ. 1986ರಲ್ಲಿ ಕೃಷಿ ವಿಚಾರ ವಿನಿಮಯ ಕೇಂದ್ರ ಆರಂಭಿಸಿದ್ದನ್ನು ಪ್ರಸ್ತಾಪಿಸಿ, ಈರಯ್ಯ ಕಿಲ್ಲೇದಾರ ಹೀಗೆಂದು ನೆನಪು ಮಾಡಿಕೊಳ್ಳುತ್ತಾರೆ, "1986ರಲ್ಲಿ ಕೃಷಿ ತಾಪಸಿ ಎಂದು ಹೆಸರಾದ ಪ್ರದೀಪ ತಾಪಸ ಅವರನ್ನು ಕರೆಸಿದ್ದೆವು. ಇಡೀ ದಿನ ಅವರು ನೀಡಿದ ಉಪನ್ಯಾಸ ಕೇಳಲು ಕೇವಲ ಎಂಟು ಜನ ರೈತರು ಬಂದಿದ್ದರು."

ನಮ್ಮ ರೈತ ಮಿತ್ರರಿಗೆ ತಾಪಸ ಅವರು ಪ್ರಶ್ನೆ ಮಾಡಿದ್ದು ಹೀಗೆ: "ನಿಮ್ಮೂರಲ್ಲಿ ಟ್ರಾಕ್ಟರ್‌ಗಳು ಇವೆಯೇ? ಕೀಟನಾಶಕ ಸಿಂಪಡಿಸುವ ಸ್ಪ್ರೇ ಪಂಪುಗಳು ಇವೆಯೇ? ರಾಸಾಯನಿಕ ಗೊಬ್ಬರ ಬಳಸುತ್ತೀರಾ? ಒಕ್ಕುವ ಯಂತ್ರಗಳು ಇವೆಯೇ?" ಇವೆಲ್ಲ ನಮ್ಮಲ್ಲಿವೆ ಎಂದು ಅಭಿಮಾನದಿಂದ ಹೇಳಿದ್ದೆವು – ನಾವೆಲ್ಲ ಆಧುನಿಕ ರೈತರು ಎಂಬ ಭಾವನೆಯಿಂದ. "ಯಾವುದೇ ಕೀಟನಾಶಕ, ರಾಸಾಯನಿಕ ಗೊಬ್ಬರ ಬಳಸದೆ, ಟ್ರ್ಯಾಕ್ಟರ್, ಒಕ್ಕುವ ಯಂತ್ರ ಇಲ್ಲದೆ ನೀವು ಉತ್ಪಾದಿಸುವ ಪ್ರಮಾಣದ ಎರಡು ಪಟ್ಟು ಉತ್ಪಾದಿಸಲು ಸಾಧ್ಯವಿದೆ" ಎಂದು ತಾಪಸ ಹೇಳಿದಾಗ ನಮ್ಮ ರೈತ ಗೆಳೆಯರು ನಕ್ಕರು. ಅವರ ಮಾತು ಅರ್ಥವಾಗಬೇಕಾದರೆ "ಕಲಿತದ್ದೆಲ್ಲಾ ಮರೆಯಬೇಕು" ಎನ್ನುತಾರೆ ಈರಯ್ಯ.

"ಅಂಗೈಯಂತೆ ಹೊಲ ಮಾಡಿದರೆ" ಎಂಬ ಅಧ್ಯಾಯದಲ್ಲಿ ತನ್ನಜ್ಜ ಹೇಳುತ್ತಿದ್ದ ಜೀವನಾನುಭವದ ಈ ಮಾತನ್ನು ಸ್ಮರಿಸುತ್ತಾರೆ ಈರಯ್ಯ. ತನ್ನ ಕೃಷಿ ಅನುಭವದ ಆಧಾರದಿಂದ ಮಣ್ಣಿನ ಒಡ್ಡು, ಹುಲ್ಲಿನ ಹಾಳೆಗಳ ಮೂಲಕ ಮಣ್ಣು ಸಂರಕ್ಷಣೆಯ ಮಹತ್ವ ವಿವರಿಸುತ್ತಾ, "....ಮುಂಗೈ ಎಲ್ಲ ತುಪ್ಪ" ಎಂದು ತಿಳಿಸುತ್ತಾರೆ. "ಕಳೆಗಳು ವೈರಿಗಳಲ್ಲ" ಎಂಬ ಅಧ್ಯಾಯದ ಆರಂಭದಲ್ಲಿ, 1998ರಲ್ಲಿ ಕೃಷಿ ಪದವಿಯ ಅಂತಿಮ ವರ್ಷದ ವಿದ್ಯಾರ್ಥಿಗಳು ತನ್ನ ತೋಟಕ್ಕೆ ಭೇಟಿ ಕೊಟ್ಟಾಗ ಹೇಳಿದ ಮಾತುಗಳನ್ನು ತಿಳಿಸಿದ್ದಾರೆ ಈರಯ್ಯ. ತೋಟದಲ್ಲಿ ಬೆಳೆದು ನಿಂತ ಕಳೆ ನೋಡಿ ಅವರು ಹೇಳಿದ್ದು, "ಏನ್ರೀ ತೋಟದ ತುಂಬ ಪಾರ್ಥೇನಿಯಂ ಬೆಳೆಸೀದೀರಲ್ರೀ", "ಕಳೆನಾಶಕ ಸಿಂಪಡಿಸಿ ಬಿಡ್ರೀ, ಆಳಗೋಳ ದಾರಿ ಯಾಕ ನೋಡತೀರಿ." ಇದನ್ನು ತಿಳಿಸುತ್ತಾ ಈರಯ್ಯ ಬರೆದಿದ್ದಾರೆ, "ಒಕ್ಕಲುತನದಲ್ಲಿ ಪ್ರತ್ಯಕ್ಷವಾಗಿ ಬರುವ ಅಡಚಣೆಗಳು ಕೃಷಿ ಶಾಸ್ತ್ರ ಅಧ್ಯಯನ ಮಾಡಿ ಪದವಿ ಪ್ರಮಾಣಪತ್ರ ಗಿಟ್ಟಿಸುವವರಿಗೆ ಹೊಳೆಯದ ಸಂಗತಿ."

ತನ್ನ ಮಾತನ್ನು ಈರಯ್ಯ ವಿವರಿಸುವ ಪರಿ ಗಮನಿಸಿ: "ಹೊಲದಲ್ಲಿ ಕಾಲಿಡಲು ಅಂಜಿಕೆಯಾಗಬೇಕು, ಅಷ್ಟು ಕಳೆ ಬೆಳೆದಿತ್ತು."…. "ತೋಟದಲ್ಲಿ ಪಾರ್ಥೇನಿಯಂ ಕಸ ಒಂದೇ ಬೆಳೆದಿರಲಿಲ್ಲ. ಕುದುರೆಮೆಂತೆ, ಹನ್ನಿ ಕಸ, ನರಿಬಾಲದ ಹುಲ್ಲು,ಚಿಂಪಿಗ್ಯಾನ ಹುಲ್ಲು, ಕಡಗೋಲ ಮಂಡ್ಯಾನ ಹುಲ್ಲು, ಇಗಳಿ, ಕಿರಕಸಾಲಿ, ಹಕ್ಕರಿಕೆ, ತೀಕಿ ತಪ್ಪಲಿನ ಕಸ ಮೊದಲಾದ ಕಸಗಳೂ ಬೆಳೆದಿದ್ದವು.....ಐದು ಜನ ಹೆಂಗಸರು ಆರು ದಿನಗಳಲ್ಲಿ ಎಲ್ಲ ಕಸವನ್ನು ಕಿತ್ತು ಹಾಕಿ ಅಲ್ಲಲ್ಲಿ ಮೆದೆ ಮಾಡಿ ಇಟ್ಟರು. ಅದನ್ನೆಲ್ಲಾ ಮಾವು, ಕರಿಬೇವು, ನುಗ್ಗೆ ಗಿಡಗಳ ಬುಡದ ಸುತ್ತಲೂ ಹೊದಿಕೆ ಮಾಡಿಸಿದೆ. ಇದಕ್ಕೆ 460 ರೂಪಾಯಿ ಖರ್ಚಾದವು. ಇದನ್ನೆಲ್ಲ ಹೇಳುವುದರ ಔಚಿತ್ಯ ಏನೆಂದರೆ ಕಳೆಕಸಗಳನ್ನು ವೈರಿಗಳಂತೆ ಕಾಣುವುದು ತಪ್ಪು. ಕಳೆ ಕೀಳುವಾಗ ಪ್ರತಿ ದಿವಸ ಎರಡು ಮೂರು ಹೊರೆ ಹುಲ್ಲು, ಹಸಿರುಮೇವು ಸಿಕ್ಕಿತು. ಕಿರಕಸಾಲಿ ಮತ್ತು ಹಕ್ಕರಿಕೆಯ ತಪ್ಪಲು ಪಲ್ಯ ಸಿಕ್ಕಿತು. ಗಿಡಗಳ ಸುತ್ತ ಕಳೆಕಸಗಳ ಹೊದಿಕೆ ಮಾಡಿದ್ದರಿಂದ ನನ್ನ ತೋಟಕ್ಕೆ ಹಲವಾರು ಪ್ರಯೋಜನಗಳಾದವು."




ಇಂತಹ ಒಳನೋಟಗಳನ್ನು ತಮ್ಮ ಪುಸ್ತಕದಲ್ಲಿ ನೀಡುವ ಈರಯ್ಯ ಕಿಲ್ಲೇದಾರ ಕೃಷಿಯನ್ನೇ ನಂಬಿ ಬದುಕುತ್ತಿರುವವರು. ವಿಷ ರಾಸಾಯನಿಕಗಳ ಬಳಕೆಯ ಆಧುನಿಕ ಕೃಷಿ ಪದ್ಧತಿಗಳಿಂದ ದೂರ ನಿಂತವರು. ಸಾಂಪ್ರದಾಯಿಕ ಒಕ್ಕಲುತನ ಅನುಸರಿಸುತ್ತಿರುವವರು. ಹೊಲದಲ್ಲಿ ಕಾಯಕ ಮಾಡುತ್ತಾ ಗಳಿಸಿದ ಅನುಭವವನ್ನು ಬರಹಗಳ ಮೂಲಕ ದಾಖಲಿಸುವ ಕಾಯಕವನ್ನೂ ಮಾಡುತ್ತಿದ್ದಾರೆ. ಈ ಪುಸ್ತಕ ಅವರ ಅನುಭವದ ಸಾರ.

– ಅಡ್ಡೂರು ಕೃಷ್ಣ ರಾವ್


## ಸಾ ಹಿ ತ್ಯ  ಕೃ ಷಿ

**ಸಾಂಪ್ರದಾಯಿಕ ಒಕ್ಕಲುತನ**
ಲೇಖಕರು: ಈರಯ್ಯ ಕಿಲ್ಲೇದಾರ
ಪ್ರಕಾಶಕರು: ಕನ್ನಡ ಪುಸ್ತಕ ಪ್ರಾಧಿಕಾರ, ಜೆ.ಸಿ. ರಸ್ತೆ, ಬೆಂಗಳೂರು 560 006
ಪ್ರಥಮ ಮುದ್ರಣ 2008,
ಪುಟ 92, ಬೆಲೆ ರೂ.30/–

**ಗುಡ್ಡದ ಮೇಲಿನ ಏಕವ್ಯಕ್ತಿ ಸೈನ್ಯ**
ಲೇಖಕರು: ಶ್ರೀ ಪಡ್ರೆ
ಪ್ರಕಾಶಕರು: ಕೃಷಿ ಮಾಧ್ಯಮ ಕೇಂದ್ರ, 119, 1ನೇ ಮುಖ್ಯ ರಸ್ತೆ, 4ನೇ ಅಡ್ಡ ರಸ್ತೆ, ನಾರಾಯಣಪುರ, ಧಾರವಾಡ 580 008
ಪ್ರಥಮ ಮುದ್ರಣ 2008
ಪುಟ 28, ಬೆಲೆ ರೂ. 15/–

**ಕಲ್ಲುಹಾಸಿನ ಮೇಲೆ ಹಸಿರು ಹಾಸು**
ಲೇಖಕರು: ಆನಂದ ತೀರ್ಥ ಪ್ಯಾಟಿ
ಪ್ರಕಾಶಕರು: ಕೃಷಿ ಮಾಧ್ಯಮ ಕೇಂದ್ರ
ಪ್ರಥಮ ಮುದ್ರಣ 2008
ಪುಟ 28, ಬೆಲೆ ರೂ. 15/–




# ಎರಡು ಹೊಸ ಪುಸ್ತಕ

ಕೃಷಿ ಮತ್ತು ಗ್ರಾಮೀಣ ಪತ್ರಿಕೋದ್ಯಮ ತರಬೇತಿ ನಡೆಸುತ್ತ ಈಗಾಗಲೇ ಆರು (ವಾರ್ಷಿಕ) ತಂಡಗಳಲ್ಲಿ ಬರಹಗಾರರನ್ನು ಸಜ್ಜುಗೊಳಿಸಿರುವ ಸಂಸ್ಥೆ "ಕೃಷಿ ಮಾಧ್ಯಮ ಕೇಂದ್ರ". ಇದು ನಡೆಸುವ ಒಂದು ವರುಷದ ಅವಧಿಯ ಅಂಚೆ ತೆರಪಿನ ತರಬೇತಿಗೆ ಯಾವುದೇ ವಿಶ್ವವಿದ್ಯಾಲಯದ ಮಾನ್ಯತೆ ಇಲ್ಲ. ಆದರೆ ಈ ತರಬೇತಿಯಲ್ಲಿ ರೂಪುಗೊಂಡ ಬರಹಗಾರರ ಲೇಖನಗಳು ಹಲವು ಕೃಷಿ ಪತ್ರಿಕೆಗಳಲ್ಲಿ ಹಾಗೂ ವಾರ್ತಾ ಪತ್ರಿಕೆಗಳ ಕೃಷಿ ಪುಟಗಳಲ್ಲಿ ಪ್ರಕಟವಾಗುತ್ತ ಗಮನ ಸೆಳೆದಿವೆ.

ಇದೀಗ ಕೃಷಿ ಮಾಧ್ಯವ ಕೇಂದ್ರವು "ಪುಸ್ತಕಗಳ ಸರಣಿ" ಪ್ರಕಟಣಾ ಯೋಜನೆ ಕೈಗೆತ್ತಿಕೊಂಡಿದೆ. ಆ ಸರಣಿಯ ಎರಡು ಪುಸ್ತಕಗಳ ಪರಿಚಯ ಇಲ್ಲಿದೆ.

ಶ್ರೀಪಡ್ರೆ ಬರೆದ "ಗುಡ್ಡದ ಮೇಲಿನ ಏಕವ್ಯಕ್ತಿ ಸೈನ್ಯ" ನಿರಂತರ ಶ್ರಮದಿಂದ ನೆಮ್ಮದಿಯ ಬದುಕನ್ನು ತನ್ನದಾಗಿಸಿಕೊಂಡ ಕೃಷಿಕನೊಬ್ಬನ ಕತೆ. ಅವರು ದಕ್ಷಿಣ ಕನ್ನಡದ ಅಡ್ಯನಡ್ಕ ಹತ್ತಿರದ ಮಹಾಲಿಂಗ ನಾಯ್ಕ. ಬೋಳುಗುಡ್ಡದಲ್ಲಿ ನೀರಿಗಾಗಿ ಹಲವಾರು ಸುರಂಗ ತೋಡಿದರೂ ಅವರಿಗೆ ನೀರು ಸಿಕ್ಕಲಿಲ್ಲ. ಆದರೆ ಅವರು ಕೈಚೆಲ್ಲಲಿಲ್ಲ. ಕೊನೆಗೊಂದು ಸುರಂಗದಲ್ಲಿ ಸಿಕ್ಕ ನೀರಿನಾಸರೆಯಿಂದಲೇ ಗುಡ್ಡದಲ್ಲಿ ಹಸುರು ತೋಟ ಎಬ್ಬಿಸಿದರು. ದೇಶದ ಉದ್ದಗಲದಲ್ಲಿ ಸಾವಿರಾರು ರೈತರು ಸಾವಿಗೆ ಶರಣಾಗುತ್ತಿರುವ ಈಗಿನ ಸನ್ನಿವೇಶದಲ್ಲಿ ಮಹಾಲಿಂಗ ನಾಯ್ಕರ ಪರಿಶ್ರಮದ ಬದುಕಿನ ನೆಮ್ಮದಿಯ ಸಂದೇಶ ಮಹತ್ವದ್ದು. (28 ಪುಟಗಳ ಪುಸ್ತಕದ ಬೆಲೆ ರೂ.15)

"ಕಲ್ಲು ಹಾಸಿನ ಮೇಲೆ ಹಸಿರು ಹಾಸು" ಆನಂದತೀರ್ಥ ಪ್ಯಾಟಿ ಬರೆದ ಪುಸ್ತಕ. ಇದು ಕೊಪ್ಪಳ ಜಿಲ್ಲೆಯ ಕಲ್ಲತಾವರೆಗೆರೆ ಗ್ರಾಮದ ಶೇಖಮ್ಮ ಮತ್ತು ಹುಚ್ಚಪ್ಪ ದಂಪತಿಯ ಸಾಧನೆಯ ಕತೆ. ಕಲ್ಲು ತುಂಬಿದ ನೆಲದಲ್ಲಿ ಹಸುರು ಹಬ್ಬಿಸಿದ ಇವರ ಸಾಹಸವನ್ನು ಓದಿ ತಿಳಿಯಬೇಕು. ಫಲವತ್ತಾದ ಜಮೀನು ಇದ್ದರೂ ಶ್ರಮ ಪಡದೆ ಫಸಲು ಕೈಗೆ ಹತ್ತಲಿಲ್ಲವೆಂದು ಕೊರಗುವವರು ಇವರಿಬ್ಬರ ಬದುಕಿನಿಂದ ಕೃಷಿ ಕಾಯಕದ ಮರ್ಮ ತಿಳಿಯಬಹುದು. ಅಂತಹ ಬಂಜರು ನೆಲದಲ್ಲೇ ಹುಲುಸಾಗಿ ಕೃಷಿ ಮಾಡುತ್ತ ಕಾಯಕವೇ ಕೈಲಾಸ ಎಂಬ ಸತ್ಯವನ್ನು ಲೋಕಕ್ಕೆ ಸಾರುತ್ತಿದ್ದಾರೆ ಈ ದಂಪತಿ. (28 ಪುಟಗಳ ಪುಸ್ತಕದ ಬೆಲೆ ರೂ.15)


ಈ ಪುಸ್ತಕಗಳ ಮೂಲಕ ಪುಸ್ತಕ ಪ್ರಕಟಣಾ ಪ್ರಪಂಚದಲ್ಲಿಯೂ ಕೃಷಿ ಮಾಧ್ಯಮ ಕೇಂದ್ರ ಹೊಸತನ ಮೂಡಿಸಿದೆ. ಆಕರ್ಷಕ ಮುಖಪುಟ, ವಿನ್ಯಾಸ ಹಾಗೂ ತಪ್ಪಿಲ್ಲದ ಮುದ್ರಣ ಈ ಪುಸ್ತಕಗಳ ವಿಶೇಷತೆ. ಕನ್ನಡದಲ್ಲಿ ಕೃಷಿಯ ಬಗ್ಗೆ ಇಂತಹ ಉತ್ತಮ ಗುಣಮಟ್ಟದ ಪುಸ್ತಕಗಳು ಪ್ರಕಟವಾಗಿರುವುದು ವಿರಳ.

ಪುಸ್ತಕಗಳ ಪ್ರತಿಗಳಿಗಾಗಿ ಸಂಪರ್ಕಿಸಬೇಕಾದ ಫೋನ್: 0836– 2444736 ಇ ಮೇಲ್: agriculturalmedia@gmail.com

# ಮೈಕೇಲ್, ಮೊಬೈಲ್ ಮತ್ತು ಗ್ರಾಮೀಣಾಭಿವೃದ್ಧಿ

– ಚಾಮರಾಜ ಸವಡಿ

(ಮೈಕೇಲ್ ರಿಗ್ಸ್. ವಿಶ್ವ ಸಂಸ್ಥೆಯ ಆಹಾರ ಮತ್ತು ಕೃಷಿ ಸಂಘಟನೆಯ ಜ್ಞಾನ ಮತ್ತು ಮಾಹಿತಿ ನಿರ್ವಹಣೆ ಅಧಿಕಾರಿ. ಐ.ಸಿ.ಟಿ. (ಇನ್‌ಫರ್ಮೇಶನ್ ಅಂಡ್ ಕಮ್ಯುನಿಕೇಶನ್ ಟೆಕ್ನಾಲಜಿ) ಅಂದರೆ, ಮಾಹಿತಿ ಮತ್ತು ದೂರಸಂಪರ್ಕ ತಂತ್ರಜ್ಞಾನವನ್ನು ಗ್ರಾಮೀಣ ಅಭಿವೃದ್ಧಿಗೆ ಬಳಸಲು ಪ್ರೇರೇಪಿಸುವುದು ಅವರ ಜವಾಬ್ದಾರಿ. ಆಗಸ್ಟ್ ಕೊನೆಯ ವಾರದಲ್ಲಿ ಬೆಂಗಳೂರಿಗೆ ಬಂದಿದ್ದ ರಿಗ್ಸ್ ಕನಿಂಗ್‌ಹ್ಯಾಮ್ ರಸ್ತೆಯಲ್ಲಿರುವ ದಿ ಸೆಂಟರ್ ಫಾರ್ ಇಂಟರ್ನೆಟ್ ಅಂಡ್ ಸೊಸೈಟಿಯಲ್ಲಿ ಭಾಷಣ ಮಾಡಿದರು. ತಂತ್ರಜ್ಞಾನದ ನೆರವಿನಿಂದ ಗ್ರಾಮೀಣ ಅಭಿವೃದ್ಧಿ ಸುಲಭ ಎಂಬುದು ಅವರ ಮಾತಿನ ಸಾರಾಂಶ. ಆ ಸಂದರ್ಭದಲ್ಲಿ ಹಾಜರಿದ್ದ ಕೃಷಿ ಸಂಪದ ತಂಡ ಗ್ರಹಿಸಿದ ವಿವರ ಇಲ್ಲಿದೆ)



ಒಂದು ಸರಳ ಮಾಹಿತಿ ಸಾಧನವೊಂದು ನಮ್ಮ ಗ್ರಾಮೀಣ ಪ್ರದೇಶದ ಬದುಕನ್ನೇ ಪ್ರಗತಿಯತ್ತ ಕೊಂಡೊಯ್ಯಬಲ್ಲುದೆ? ವಿಶ್ವ ಸಂಸ್ಥೆಯ ಆಹಾರ ಮತ್ತು ಕೃಷಿ ಸಂಘಟನೆಯ ಅಧಿಕಾರಿ ಮೈಕೇಲ್ ರಿಗ್ಸ್ ಪ್ರಕಾರ ಅದು ಖಂಡಿತ ಸಾಧ್ಯ. ಇದಕ್ಕೆ ಅವರು ನೀಡುವ ಉದಾಹರಣೆ ಮೊಬೈಲ್.

ಮೊಬೈಲ್ ಯಂತ್ರದ ಬಳಕೆಯ ಸಾಧ್ಯತೆಗಳು ಅಪಾರ ಅಂತಾರೆ ರಿಗ್ಸ್. ಇದರಿಂದ ರೈತ ಮತ್ತು ಮಾಹಿತಿ ಭಂಡಾರದ ನಡುವಿನ ದೂರ ಇಲ್ಲವಾಗುತ್ತದೆ. ರೈತನಿಗೆ ಬೇಕಾದ ಮಾಹಿತಿಯನ್ನು ಸಂಬಂಧಿಸಿದ ಸಂಸ್ಥೆ ಅಥವಾ ಸರ್ಕಾರ ತಕ್ಷಣ ಅವರಿಗೆ ತಲುಪಿಸಬಹುದು. ಬರ, ಅತಿವೃಷ್ಟಿ, ಕೀಟಬಾಧೆ, ಬೆಲೆ ಏರಿಳಿತ, ಯಾವ ಪ್ರದೇಶಕ್ಕೆ ಯಾವ ಬೆಳೆ ಸೂಕ್ತ, ಬಿತ್ತನೆ ಹೇಗೆ, ಕಾಲಕಾಲಕ್ಕೆ ಅನುಸರಿಸಬೇಕಾದ ಬೇಸಾಯ ಕ್ರಮಗಳಾವವು, ಯಾವ ಮಣ್ಣಿಗೆ ಎಂಥ ಬೆಳೆ ಸೂಕ್ತ– ಹೀಗೆ ಕೃಷಿ ಸಂಬಂಧಿ ವಿಷಯಗಳೆಲ್ಲವನ್ನೂ ಮೊಬೈಲ್ ಮೂಲಕ ಅಪ್‌ಡೇಟ್ ಮಾಡುತ್ತ ಹೋಗಬಹುದು. ಒಂದೇ ಸಂದೇಶವನ್ನು ಸಂಬಂಧಿಸಿದ ಎಲ್ಲ ರೈತರಿಗೂ ಏಕಕಾಲಕ್ಕೆ ತಲುಪಿಸುವುದು ಮೊಬೈಲ್ ಮೂಲಕ ಸುಲಭ. ಅಷ್ಟೇ ಅಲ್ಲ, ರೈತರೈತರ ನಡುವೆ ಕೂಡ ಇದು ಸಂಪರ್ಕ ಸಾಧನವಾಗಿ, ಮಾಹಿತಿ ವಿನಿಮಯಕ್ಕೆ ನೆರವಾಗಬಲ್ಲುದು.

ಇಂಥದೇ ಇನ್ನೊಂದು ತಂತ್ರಜ್ಞಾನ ವಿಡಿಯೋ ಕಾನ್ಫರೆನ್ಸಿಂಗ್. ರೈತನ ಹೊಲದ ವಾಸ್ತವ ಪರಿಸ್ಥಿತಿ ಏನೆಂಬುದನ್ನು ಇಲ್ಲಿ ತಕ್ಷಣ ಅರಿಯಬಹುದು. ಸಂಬಂಧಿಸಿದ ರೈತರೊಂದಿಗೆ ಹಾಗೂ ಅಧಿಕಾರಿಗಳೊಂದಿಗೆ ನೇರವಾಗಿ ಮಾತನಾಡಿ, ಸೂಕ್ತ ಪರಿಹಾರ ಕ್ರಮಗಳನ್ನು ಕೈಗೊಳ್ಳಬಹುದು. ಇದರಿಂದ ಹಣ ಮತ್ತು ಸಮಯದ ಅಪಾರ ಉಳಿತಾಯವಾಗುತ್ತದೆ ಮತ್ತು ಪರಿಹಾರ ಕೂಡ ಶೀಘ್ರವಾಗಿ ಲಭಿಸುತ್ತದೆ ಅಂತಾರೆ ಮೈಕೇಲ್ ರಿಗ್ಸ್.

ಈ ಎಲ್ಲ ಉದಾಹರಣೆಗಳು ಕೇವಲ ಆದರ್ಶಗಳಲ್ಲ. ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ ವಿವಿಧ ದೇಶಗಳಲ್ಲಿ ಇದನ್ನು ಯಶಸ್ವಿಯಾಗಿ ಪ್ರಯೋಗಿಸಿದೆ. ರೈತರೆಂದರೆ ಏನೂ ಗೊತ್ತಿರದ ಜನ ಎಂಬ ಭ್ರಮೆಯನ್ನು ಬದಿಗಿಟ್ಟು, ತಂತ್ರಜ್ಞಾನವನ್ನು ಅವರ ಕೈಗೆ ತಲುಪಿಸಿದರೆ ಪ್ರಗತಿ ಖಂಡಿತ. ಗ್ರಾಮೀಣ ಪ್ರದೇಶದ ಜನ ಹೇಗೆ ಬದುಕುತ್ತಿದ್ದಾರೆ ಎಂಬ ಕಲ್ಪನೆಯೇ ಬಹಳಷ್ಟು ಕಡೆ ಸ್ಪಷ್ಟವಾಗಿಲ್ಲ. ಹೀಗಿರುವಾಗ, ಅವರಿಗಾಗಿ ರೂಪಿಸುವ ಯೋಜನೆಗಳು ಅವರನ್ನು ತಲುಪುವುದಾದರೂ ಹೇಗೆ ಎಂಬುದು ರಿಗ್ಸ್ ಪ್ರಶ್ನೆ.

ತಂತ್ರಜ್ಞಾನ ಬಳಸಿ, ಗ್ರಾಮೀಣ ಪ್ರದೇಶವನ್ನು ಕಾಡುತ್ತಿರುವ ಸಮಸ್ಯೆಗಳನ್ನು ಅರಿತುಕೊಳ್ಳಿ. ನಂತರ, ಅವನ್ನು ನಿವಾರಿಸುವ ಕುರಿತು ಯೋಜನೆಗಳನ್ನು ರೂಪಿಸಿ. ಮಾಹಿತಿಯನ್ನು ಸಂಬಂಧಿಸಿದವರಿಗೆ ತಲುಪಿಸಿ. ಅವರೂ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಉತ್ತೇಜಿಸಿ.

ಮೊಬೈಲ್ ಕಂಪನಿಗಳು ಕೂಡ ಈ ಕೆಲಸಕ್ಕೆ ಕೈಜೋಡಿಸಬಲ್ಲವು. ಆಗ ಯಾವೊಂದು ಸಮಸ್ಯೆಯೂ ಅಲ್ಲಿಯೇ ಉಳಿದುಬಿಡದೇ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ಬರುತ್ತದೆ. ಆಗ ಪರಿಹಾರ ಸುಲಭ. ಹಲವಾರು ಬುದ್ಧಿಜೀವಿಗಳು ಹಾಗೂ ತಂತ್ರಜ್ಞರು ಸೇರಿ ರೂಪಿಸಿದ್ದು ಮಾಹಿತಿ ಮತ್ತು ತಂತ್ರಜ್ಞಾನ ಬಳಕೆಯ ಈ ಐಡಿಯಾ. ಹಿಂದುಳಿದ ದೇಶವಾದ ಭೂತಾನ್, ಅಭಿವೃದ್ಧಿಶೀಲ ದೇಶಗಳಾದ ಶ್ರೀಲಂಕಾ, ಮಲೇಷ್ಯದಲ್ಲಿ ಈ ಪ್ರಯೋಗ ಯಶಸ್ವಿಯಾಗಿದೆ ಅಂತಾರೆ ರಿಗ್ಸ್.

'ಗ್ರಾಮೀಣ ಪ್ರದೇಶಕ್ಕೆ ಮಾಹಿತಿ ರವಾನಿಸುವುದು ಎಲ್ಲಾ ಕಾಲದಲ್ಲೂ ಎದುರಾಗಿರುವ ಸವಾಲು. ಇವತ್ತಿಗೂ ತುಂಬ ಜನ ಇದು ಕಷ್ಟಕರ ಎಂದೇ ಭಾವಿಸಿದ್ದಾರೆ. ಅವರ ಪ್ರಕಾರ ಮಾಹಿತಿ ಎಂದರೆ ಅಕ್ಷರರೂಪದಲ್ಲಿ ಇರುವಂಥದು. ವೆಬ್‌ಸೈಟ್, ದಿನಪತ್ರಿಕೆಗಳಲ್ಲಿ ಬರುವ ಮಾಹಿತಿಯನ್ನು ರೈತ ಓದಬಲ್ಲನೆ? ಎಂಬುದು ಅವರ ಪ್ರಶ್ನೆ. ನಿಜ, ರೈತನಿಗೆ ವೆಬ್‌ಸೈಟ್ ನೋಡಲು ಆಗಲಿಕ್ಕಿಲ್ಲ. ಸರ್ಕಾರ ನೋಡಬಹುದಲ್ಲ? ಸಂಬಂಧಿಸಿದ ಅಧಿಕಾರಿಗಳು ನೋಡಬಹುದು. ಅಲ್ಲಿಂದ ಹೆಕ್ಕಿದ ಮಾಹಿತಿಯನ್ನು ರೈತನಿಗೆ ತಲುಪಿಸುವುದಷ್ಟೇ ಮುಂದಿನ ಕೆಲಸ. ಮೊಬೈಲ್ ಅದನ್ನು ವೇಗವಾಗಿ ಮತ್ತು ಪರಿಣಾಮಕಾರಿಯಾಗಿ ಮಾಡಬಹುದು. ರೇಡಿಯೋದಂತೆ ಇಲ್ಲಿ ಒಮ್ಮುಖ ಸಂಪರ್ಕ ಇಲ್ಲ. ರೈತರೊಂದಿಗೆ ನೇರ ಸಂವಾದ ಸಾಧ್ಯವಿರುವುದರಿಂದ, ಸಮಸ್ಯೆ ಬೇಗ ಪರಿಹಾರ ಕಾಣಬಲ್ಲುದು' ಎಂಬುದು ಮೈಕೇಲ್ ರಿಗ್ಸ್ ವಾದ.

> ❛ ಮೊಬೈಲ್ ತಂತ್ರಜ್ಞಾನ ಬಳಸಿ ಪ್ರತಿ ಹಳ್ಳಿಗೆ ಅದಕ್ಕೆ ಬೇಕಾದ ರೀತಿಯ ಪರಿಹಾರ ಕ್ರಮ ರೂಪಿಸಲು ಸಾಧ್ಯ.

ಹೀಗಾಗಿ, ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ ಮಾಹಿತಿ ತಂತ್ರಜ್ಞಾನದ ನೆರವಿನಿಂದ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಮುಂದಾಗಿದೆ. ಅದರಲ್ಲೂ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಭಾರತದಂಥ ದೇಶದಲ್ಲಿ, ಪ್ರಗತಿಯ ಸಾಧ್ಯತೆಗಳು ಅಪಾರ. ಇಲ್ಲಿ ಮೊಬೈಲ್ ದರ ಅತ್ಯಂತ ಕಡಿಮೆ. ವ್ಯಾಪ್ತಿ ಹೆಚ್ಚು. ಹಲವಾರು ಕಂಪನಿಗಳು ಕಣದಲ್ಲಿರುವುದರಿಂದ ಸ್ಪರ್ಧಾತ್ಮಕ ದರದಲ್ಲಿ ಸೇವೆ ಸಿಗುತ್ತದೆ. ರೈತರ ಯೋಜನೆಗಳಿಗೆ ಇನ್ನೂ ರಿಯಾಯಿತಿ ಪಡೆಯಬಹುದು. ಸರ್ಕಾರ ಮನಸ್ಸು ಮಾಡಿದರೆ, ಖಂಡಿತವಾಗಿ ಗ್ರಾಮೀಣ ಅಭಿವೃದ್ಧಿ ಕೆಲಸ ತೀವ್ರಗೊಳ್ಳುತ್ತದೆ ಎಂಬುದು ರಿಗ್ಸ್ ಮಾತಿನ ಸಾರಾಂಶ.

ಇಷ್ಟೊಂದು ತಂತ್ರಜ್ಞಾನ ಬಂದಿದ್ದರೂ ಹಸಿವೆಯನ್ನು ಹೋಗಲಾಡಿಸಲು ಆಗಿಲ್ಲ. ಎಲ್ಲ ಪ್ರದೇಶಗಳಿಗೂ ಒಂದೇ ರೀತಿಯ ಯೋಜನೆ ರೂಪಿಸುವ ಸಾಂಪ್ರದಾಯಿಕ ವಿಧಾನಗಳಿಂದ ಉಪಯೋಗವಿಲ್ಲ. ಮೊಬೈಲ್ ತಂತ್ರಜ್ಞಾನವೊಂದನ್ನೇ ಬಳಸಿಕೊಂಡರೂ ಪ್ರತಿಯೊಂದು ಹಳ್ಳಿಗೆ ಅದಕ್ಕೆ ಬೇಕಾದ ರೀತಿಯ ಪರಿಹಾರ ಕ್ರಮಗಳನ್ನು ರೂಪಿಸಲು ಸಾಧ್ಯ. ಆಗ ಭೂಮಿಯ ಇನ್ನೊಂದು ಮೂಲೆಯಲ್ಲಿರುವ ರೈತನೊಂದಿಗೆ ಇಲ್ಲಿಯ ರೈತ ಸಂಪರ್ಕ ಹೊಂದಲು, ಮಾಹಿತಿ ವಿನಿಮಯ ಮಾಡಿಕೊಳ್ಳಲು ಸಾಧ್ಯ. ಹೊಸ ವಿಚಾರ, ವಿಧಾನ ದಕ್ಕಿ ರೈತನೊಳಗೊಬ್ಬ ಕ್ರಿಯಾಶೀಲ ವಿಜ್ಞಾನಿ, ಕೆಲಸಗಾರ ಕಣ್ತೆರೆಯುತ್ತಾನೆ. ಅಭಿವೃದ್ಧಿ ವೇಗವಾಗಿ ನಡೆಯುತ್ತದೆ. ನನ್ನ 8 ವರ್ಷದ ಅನುಭವ ಹೇಳುವುದಾದರೆ, ಜಗತ್ತಿನ ಎಲ್ಲ ಗ್ರಂಥಾಲಯಗಳನ್ನು ಸೇರಿಸಿದರೆ ಸಿಗುವ ಮಾಹಿತಿಗಿಂತ ನಮ್ಮ ಹತ್ತಿರ ಹೆಚ್ಚು ಮಾಹಿತಿ ಸಂಗ್ರಹವಾಗಬಲ್ಲುದು ಅಂತಾರೆ ರಿಗ್ಸ್.

ಸಮುದಾಯಗಳನ್ನು ಸ್ಥಾಪಿಸಿಕೊಳ್ಳಬೇಕು. ಇಪ್ಪತ್ತರಿಂದ ನೂರು ಜನರಿರುವ ಸಣ್ಣ ಸಣ್ಣ ತಂಡಗಳನ್ನು ರಚಿಸುವ ಮೂಲಕ ನಾವು ಗುರಿಯನ್ನು ಸುಲಭವಾಗಿ ತಲುಪಬಹುದು. ಪ್ರತಿಯೊಂದು ಸಮುದಾಯವೂ ದೂರ ಸಂಪರ್ಕ ಸಾಧನಗಳ ಮೂಲಕ ಪರಸ್ಪರ ಸಂಪರ್ಕ ಹೊಂದಬೇಕು. ವಿಚಾರ ವಿನಿಮಯವಾಗಬೇಕು. ರೈತರ ಇಂಥ ಸಮುದಾಯ ಜಗತ್ತಿನ ಎಲ್ಲ ಭಾಗಗಳ ಜನರನ್ನು ಒಳಗೊಳ್ಳಬೇಕು. ಏಕೆಂದರೆ, ಜಗತ್ತಿನ ಎಲ್ಲ ರೈತರ ಸಮಸ್ಯೆಗಳು ಹಾಗೂ ಪರಿಹಾರಗಳೂ ಒಂದೇ ಆಗಿವೆ. ಏಕದಿಂದ ಅನೇಕ (ಒನ್ ಟು ಮೆನಿ) ನೀತಿಯಿಂದ ಸಾಕಷ್ಟು ರೈತರು ಪರಸ್ಪರ ಸಂಪರ್ಕಿಸಬಲ್ಲರು, ಮಾಹಿತಿ ವಿನಿಮಯ ಮಾಡಿಕೊಳ್ಳಬಲ್ಲರು. ಒಂದು ಮಾಹಿತಿ ಸಾವಿರಾರು ಜನರನ್ನು ತಲುಪಬಲ್ಲುದು. ಕಳೆದ ಎಂಟು ವರ್ಷಗಳಲ್ಲಿ ನಾನು ಕಂಡುಕೊಂಡ ಯಶಸ್ಸಿನ ಗುಟ್ಟಿದು ಎಂದರು ರಿಗ್ಸ್.

ಸಿಐಎಸ್ (ಸೆಂಟರ್ ಫಾರ್ ಇಂಟರ್ನೆಟ್ ಸೊಸೈಟಿ) ಈ ಕೆಲಸಕ್ಕೆ ಮುಂದಾಗಬೇಕು ಎಂದು ಆಶಿಸಿದ ರಿಗ್ಸ್, ಗ್ರಾಮೀಣ ಜನತೆಯನ್ನು ತಲುಪುವ ಕೆಲಸ ನಿಮ್ಮಿಂದ ಪ್ರಾರಂಭವಾಗಲಿ ಎಂದರು. ಜಗತ್ತಿನ ಯಾವೊಂದು ಸಮುದಾಯವೂ ತನ್ನ ಸಮಸ್ಯೆಯನ್ನು ತಾನೊಂದೇ ಪೂರ್ತಿಯಾಗಿ ಪರಿಹರಿಸಿಕೊಳ್ಳಲು ಸಾಧ್ಯವಿಲ್ಲ. ಹೀಗಾಗಿ, ಸಮುದಾಯದ ಪಾಲ್ಗೊಳ್ಳುವಿಕೆ ಮುಖ್ಯವಾಗುತ್ತದೆ. ಹೀಗಾಗಿ, ಎಲ್ಲರೂ ಜೊತೆಯಾಗಿ ಕೆಲಸ ಮಾಡೋಣ. ಆಗ, ಸಮಸ್ಯೆಗಳು ಹಗುರವಾಗುತ್ತವೆ. ಲಾಭ ದುಪ್ಪಟ್ಟಾಗುತ್ತದೆ ಎಂದರು.

ಮೈಕೇಲ್ ರಿಗ್ಸ್ ಹೊಸ ರೀತಿಯ ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿಯ ಕನಸನ್ನು ಬಿತ್ತುತ್ತ ನಡೆದಿದ್ದಾರೆ. ಅದನ್ನು ಗ್ರಾಮೀಣ ಪ್ರದೇಶಕ್ಕೆ ತಲುಪಿಸುವ ಜವಾಬ್ದಾರಿ ನಮ್ಮೆಲ್ಲರದು.

## ಮೆಣಸಿನಕಾಯಿ ಬಾಂಬ್



ನೀವೆಲ್ಲ ಅಶ್ರುವಾಯು ಹೆಸರನ್ನು ಕೇಳಿದ್ದೀರಿ. ಗುಂಪು ಗಲಭೆ ಸಂದರ್ಭದಲ್ಲಿ ಜನರನ್ನು ಚೆದುರಿಸಲು ಪೊಲೀಸರು ಬಳಸುವ ಹೊಗೆ ಬಾಂಬ್ ಇದು. ಸ್ಫೋಟದ ನಂತರ ಈ ರಾಸಾಯನಿಕ ಹೊಗೆ ಉತ್ಪತ್ತಿ ಮಾಡುತ್ತದೆ. ಇದು ಕಣ್ಣಿನಲ್ಲಿ ನೀರು ತರಿಸುವುದರಿಂದ, ಇದಕ್ಕೆ ಅಶ್ರುವಾಯು ಎಂದು ಹೆಸರು.

ಈಗ ಅಶ್ರುವಾಯು ಬದಲಾಗಿ ಪರಿಸರಸ್ನೇಹಿ ಮೆಣಸಿನಕಾಯಿ ಬಾಂಬ್ ಬಳಕೆಗೆ ಬಂದಿದೆ. ಸದ್ಯ ಈ ಪ್ರಯೋಗ ನಡೆಯುತ್ತಿರುವುದು ಅಸ್ಸಾಂ ರಾಜ್ಯದಲ್ಲಿ. ತೀರಾ ಘಾಟು ಮೆಣಸಿನಕಾಯಿ ಬೀಜಗಳಿಂದ ತಯಾರಿಸಿದ ಈ ಬಾಂಬ್, ಅಶ್ರುವಾಯು ರೀತಿಯಲ್ಲೇ ಕೆಲಸ ಮಾಡುತ್ತದೆ. ಹೈ ಎನರ್ಜಿ ಮಟೀರಿಯಲ್ ರೀಸರ್ಚ್ ಲ್ಯಾಬೊರೇಟರಿ ತಯಾರಿಸಿರುವ ಮಿರ್ಚಿ ಬಾಂಬ್ ಪರಿಸರ ಮಾಲಿನ್ಯ ಉಂಟು ಮಾಡುವುದಿಲ್ಲ ಎಂಬ ಹೆಗ್ಗಳಿಕೆ ಹೊಂದಿದೆ.

ಉದ್ದೇಶಿತ ಮಿರ್ಚಿ ಬಾಂಬ್‌ನ ತೂಕ 300 ಗ್ರಾಂ ಮಾತ್ರ. ಕೇವಲ 35 ಸೆಕೆಂಡ್‌ಗಳಲ್ಲಿ 2500 ಚದರ ಮೀಟರ್ ಪ್ರದೇಶದಲ್ಲಿ ಹರಡಿ ಜನರ ಚರ್ಮದ ಮೇಲೆ ತೀವ್ರ ಉರಿತ ಉಂಟು ಮಾಡಬಲ್ಲುದು. ಆಗ ಗಲಭೆಕೋರರು ಉರಿ ತಾಳಲಾರದೇ ಓಡುತ್ತಾರಂತೆ.

ಕೆಂಪು ಮೆಣಸಿನಕಾಯಿಗಳಿಗೆ ಒಲೆರೆಸಿನ್ ಕ್ಯಾಪ್ಸಿಕಾಮ್ ಎಂಬ ವೈಜ್ಞಾನಿಕ ಹೆಸರಿದೆ. ಈ ಹಿನ್ನೆಲೆಯಲ್ಲಿ, ಮಿರ್ಚಿ ಬಾಂಬ್‌ಗಳಿಗೆ ಒ.ಸಿ. ಗ್ರೆನೇಡ್ ಎಂದು ಹೆಸರಿಡಲಾಗಿದೆ. ಇನ್ಮೇಲೆ ಗಲಭೆಕೋರರು 'ಒಸಿ' ನೋಡಿ–ಕೊಂಡೇ ಕೆಲಸಕ್ಕಿಳಿಯಬೇಕು!

# ಓದುತ್ತಿರುವ ನೀವೆಲ್ಲ ಕೃಷಿಕರೇ...

ಅನುಮಾನವೇ ಬೇಡ, ಇದನ್ನು ಓದುತ್ತಿರುವ ನೀವೆಲ್ಲ ಕೃಷಿಕರೇ. ನಿಮ್ಮ ಮನೆಯಲ್ಲಿ ಪುಟ್ಟ ಹಿತ್ತಿಲು ಇರಬಹುದು. ಮನೆ ಮುಂದೆ ನಾಲ್ಕಾರು ಮರಗಿಡ ಹೊಂದಿರಬಹುದು. ಚಪ್ಪರ ದಲ್ಲಿ ಹೂವಿನ ಅಥವಾ ತರಕಾರಿಯ ಬಳ್ಳಿ ಹಬ್ಬಿಸಿರಬಹುದು. ಕುಂಡಗಳಲ್ಲಿ ಅಲಂಕಾರಿಕ ಗಿಡ ಬೆಳೆಸಿರಬಹುದು. ಹಾಗಿದ್ದರೆ, ನೀವೂ ಕೃಷಿಕರೇ.

ಕೃಷಿ ಭೂಮಿ ಹೊಂದಿದವರು ಮಾತ್ರ ರೈತರು ಎಂಬುದು ವಿಶಾಲ ಅರ್ಥದಲ್ಲಿ ಸರಿ. ಆದರೆ, ಮೂಲತಃ ನಾವೆಲ್ಲ ಕೃಷಿಕರೇ. ನಮ್ಮ ನಮ್ಮ ಮಿತಿಯಲ್ಲಿ ಅಥವಾ ವ್ಯಾಪ್ತಿಯಲ್ಲಿ ಒಂದಲ್ಲ ಒಂದು ಚಟುವಟಿಕೆಗಳು ನಮ್ಮಲ್ಲೊಬ್ಬ ರೈತನನ್ನು ಜಾಗೃತಗೊಳಿಸಿರುತ್ತವೆ.

ಆಸಕ್ತಿಗೆಂದು ತಂದಿಟ್ಟುಕೊಂಡ ನಾಲ್ಕೈದು ಕುಂಡಗಳೇ ಸಾಕು, ನಮ್ಮೊಳಗಿನ ರೈತನನ್ನು ಎಚ್ಚರಿಸಲು. ಕುಂಡದಲ್ಲಿ ಯಾವ ಗಿಡಗಳಿರಬೇಕು? ಹಿತ್ತಿಲಲ್ಲಿ ಯಾವ ತರಕಾರಿ ಗಿಡಗಳನ್ನು ನೆಡಬೇಕು? ಯಾವ ಬೀಜಗಳನ್ನು ಬಿತ್ತಬೇಕು? ನಿತ್ಯ ಬಳಕೆಗೆ ಯಾವ ಹೂವಿನ ಗಿಡ ಉತ್ತಮ? ಎಂದೆಲ್ಲ ಪ್ರಶ್ನಿಸುತ್ತ, ನಮಗೆ ಹೊಳೆದ ಮಾರ್ಗದಲ್ಲಿ ಅವನ್ನು ಬೆಳೆಸಲು ಯತ್ನಿಸುತ್ತ ನಾವೂ ಥೇಟ್ ರೈತನಂತೆ ಯೋಚಿಸತೊಡಗುತ್ತೇವೆ.

ನಮ್ಮ ವ್ಯಾಪ್ತಿ ಚಿಕ್ಕದಿರಬಹುದು. ಆದರೆ, ಒಬ್ಬ ರೈತ ಎದುರಿಸುವ ಸಮಸ್ಯೆಗಳನ್ನೇ ಸಣ್ಣ ಪ್ರಮಾಣದಲ್ಲಿ ನಾವೂ ಎದುರಿಸುತ್ತಿರುತ್ತೇವೆ. ಅದಕ್ಕೇ ಹೇಳಿದ್ದು: ನಾವೆಲ್ಲ ಕೃಷಿಕರು ಅಂತ.

ಅಂತರ್ಜಾಲದಲ್ಲಿ ಕೃಷಿ ಬಗ್ಗೆ ಬರೆದರೆ ಅದನ್ನು ರೈತರು ನೋಡುತ್ತಾರಾ? ಎಂಬ ಪ್ರಶ್ನೆ ಸಾವಿರಾರು ಜನರನ್ನು ಕಾಡಿದೆ. ಆ ಕಾರಣಕ್ಕಾಗಿಯೇ, ಅಂತರ್ಜಾಲದಲ್ಲಿ ಕೃಷಿಗೆಂದೇ ಮೀಸಲಾದ ಬರಹಗಳು, ಪುಟಗಳು, ತಾಣಗಳು ಕಡಿಮೆ. ಮನೆಯ ಚಪ್ಪರದಲ್ಲಿ ಹರಡಿದ ಮಲ್ಲಿಗೆ ಬಳ್ಳಿಯನ್ನು ಯಾವುದೋ ರೋಗ ಕಾಡಿದರೆ, ನಾವು ರೈತನಂತೆ ಸಮಸ್ಯೆಯ ಪರಿಹಾರಕ್ಕೆ ಓಡಾಡುತ್ತೇವೆ. ಹೂ ಕುಂಡದೊಳಗಿನ ಗುಲಾಬಿ ಗಿಡ ಬಾಡಿದರೆ ನಮ್ಮ ಮನಸ್ಸೂ ಬಾಡುತ್ತದೆ. ಪುಟ್ಟ ಮಗುವೊಂದು ಕುತೂಹಲಕ್ಕೆ ಉದುರಿಸಿದ ಯಾವ್ಯಾವುದೋ ಬೀಜಗಳು ಮೊಳಕೆಯೊಡೆದಾಗ, ಇವು ಯಾವ ಗಿಡದ್ದಿರಬಹುದು? ಎಂದು ಮಗುವಿನ ಜೊತೆಗೆ ನಾವೂ ತಲೆ ಕೆಡಿಸಿಕೊಂಡಿರುತ್ತೇವೆ.

ತೆಂಗಿನ ಮರದ ಸಮಸ್ಯೆಗಳು ತೆಂಗು ಬೆಳೆವ ರೈತನನ್ನಷ್ಟೇ ಅಲ್ಲ, ನಮ್ಮನ್ನೂ ಬಾಧಿಸಿವೆ. ಹೀಗಾಗಿ, ಕೃಷಿ ಸರ್ವವ್ಯಾಪಿ. ಅಂತರ್ಜಾಲದ ಓದುಗ ನೊಬ್ಬನಿಗೆ ದಕ್ಕುವ ಮಾಹಿತಿ, ಹಕ್ಕಿಯ ಒಡಲಿನಿಂದ ಬಿದ್ದ ಹಿಕ್ಕೆಯಂತೆ, ಎಲ್ಲೋ ಮೊಳಕೆಯೊಡೆಯಬಹುದು. ಸಮಸ್ಯೆಯೊಂದಕ್ಕೆ ಪರಿಹಾರ ಸೂಚಿಸಬಹುದು. ಅಥವಾ ಸಮಸ್ಯೆಯೊಂದಕ್ಕೆ ಪರಿಹಾರ ಅಪೇಕ್ಷಿಸಬಹುದು. ಜ್ಞಾನ ಎಂಬ ಶಾಶ್ವತ ಪಣತಿಯ ಜ್ಯೋತಿ ಸದ್ದಿಲ್ಲದೇ ಹಲವಾರು ಪಣತಿಗಳನ್ನು ಜೀವಂತವಾಗಿಸುತ್ತ, ಬೆಳಕನ್ನು ಹರಡುತ್ತ ಹೋಗುತ್ತದೆ. ಒಂದು ದಿನ ಅದು ನಮ್ಮ ರೈತರನ್ನೂ ತಲುಪಬಲ್ಲುದು.

ಇವತ್ತು ಕೃಷಿ ಅನಕ್ಷರಸ್ಥರ, ಗ್ರಾಮೀಣ ಜನರ ಕಸುಬಾಗಿ ಉಳಿದಿಲ್ಲ. ವಿದ್ಯಾವಂತರು, ಇತರ ಕ್ಷೇತ್ರಗಳಲ್ಲಿರುವವರು ಕೂಡ ಅದರತ್ತ ಆಕರ್ಷಿತರಾಗಿದ್ದಾರೆ, ಆಕರ್ಷಿತರಾಗುತ್ತಿದ್ದಾರೆ. ಅವರ ಮನಸ್ಸಿನಲ್ಲಿ ನೂರಾರು ಪ್ರಶ್ನೆಗಳಿವೆ. ಅಷ್ಟೇ ಪ್ರಮಾಣದ ಕನಸುಗಳೂ ಇವೆ. ಪ್ರಶ್ನೆಗಳಿಗೆ ಉತ್ತರ ಹುಡುಕುತ್ತ, ಕನಸುಗಳನ್ನು ಈಡೇರಿಸುತ್ತ, ಹೊಸ ಕನಸುಗಳನ್ನು ಮೊಳೆಸುವ ಪವಿತ್ರ ಕೆಲಸ ಕೃಷಿ ಸಂಪದದ್ದು.

ಹೀಗಾಗಿ, ಇದಕ್ಕೆ ಜಾಗತಿಕ ಆಯಾಮ ಇದೆ. ನೈಸರ್ಗಿಕ ವಿಧಾನದಲ್ಲಿ ಬೆಳೆದ ಅಕ್ಕಿ, ಬೇಳೆ, ಬೆಲ್ಲ ಎಲ್ಲಿ ಸಿಗುತ್ತವೆ? ಊಟಕ್ಕೆ ಉತ್ತಮ ಬಾಳೆ ಎಲೆ ಎಲ್ಲಿ ದೊರೆಯುತ್ತದೆ? ಎಂಬ ಪ್ರಶ್ನೆಗಳು ಎಷ್ಟೋ ಸಾರಿ ನಮಗೆ ಬರುತ್ತಲೇ ಇರುತ್ತವೆ. ಒಂದಿಷ್ಟು ಭೂಮಿ ಖರೀದಿಸಿ ನಿವೃತ್ತರಾದ ನಂತರ ರೈತನ ಬದುಕು ನಡೆಸುವ ಯೋಚನೆ ಎಷ್ಟೋ ಜನರ ಮನಸ್ಸಿನಲ್ಲಿಲ್ಲ? ಇವತ್ತು ಅಂತರ್ಜಾಲದಲ್ಲಿ ಸಕ್ರಿಯರಾಗಿರುವ ಎಷ್ಟೋ ಜನರ ಮನೆ ಕಸುಬು ಕೃಷಿ. ಇಂಥ ಎಲ್ಲರಿಗೂ ಕೃಷಿ ಕ್ಷೇತ್ರದ ವಿವರಗಳನ್ನು ತಲುಪಿಸುವ, ಪಾರಂಪರಿಕ ಜ್ಞಾನ ಹಂಚುವ, ಸರಳ ತಂತ್ರಜ್ಞಾನಗಳನ್ನು ಪರಿಚಯಿಸುವ, ಮಾರುಕಟ್ಟೆಯ ಮಾಹಿತಿ ನೀಡುವ ಹಾಗೂ ಮುಖ್ಯವಾಗಿ, ಅವರೆಲ್ಲರ ಎದೆಯಲ್ಲಿ ಮಣ್ಣಿನ ಬಗ್ಗೆ ಪ್ರೀತಿ ಉಕ್ಕಿಸುವ ಕೆಲಸ ದೊಡ್ಡ ಪ್ರಮಾಣದಲ್ಲಿ ನಡೆಯಬೇಕಾಗಿದೆ.

ಹೀಗಾಗಿ, ಕೃಷಿ ಸಂಪದ ನಿಮಗೆಲ್ಲರಿಗೂ ದೊರೆಯುತ್ತಿರುವ ಸೊಗಸಾದ ವೇದಿಕೆ. ನಿಮ್ಮೊಳಗಿನ ಜ್ಞಾನ ಇಲ್ಲಿಯೂ ಹರಿದುಬರಲಿ. ಇಲ್ಲಿ ದೊರೆಯುವ ಮಾಹಿತಿ ನಿಮ್ಮ ಮೂಲಕ ಇತರರಿಗೂ ದಕ್ಕಲಿ.

– ಚಾಮರಾಜ ಸವಡಿ



ಮುಂಗಾರಿನ ಬೆಳಕಿನಲ್ಲಿ । ಫೋಟೋ: ಎಂ ಎಸ್ ಹೆಬ್ಬಾರ್

## ಫೋಟೋ – ಅನಿಸಿಕೆ

ಸಾಗರ ಫೋಟೋಗ್ರಾಫಿಕ್ ಸೊಸೈಟಿ 2009ರಲ್ಲಿಯೂ ಫೋಟೋ ಸ್ಪರ್ಧೆ ನಡೆಸಿದೆ. ಸ್ಪರ್ಧೆಗೆ ಈ ಬಾರಿಯ ಒಂದನೇ ವಿಷಯ "ಗ್ರಾಮೀಣ ಬದುಕು". ಅದರಲ್ಲಿ ಮೊದಲನೇ ಬಹುಮಾನ ಪಡೆದ ಫೋಟೋ ದೊಡ್ಡಬಳ್ಳಾಪುರದ ಎನ್. ರಘುಪತಿ ಅವರದು(ಮುಸ್ಸಂಜೆಯ ಹೊತ್ತಿನಲ್ಲಿ). ಎರಡನೇ ಬಹುಮಾನ ಪಡೆದ ಫೋಟೋ ಕೊಪ್ಪಳದ ಮಾರುತಿ ಎಚ್. ಕಟ್ಟೀಮನಿ ಅವರದು(ನೀರ ದಾರಿ ದೂರ).


ನಮ್ಮ ಸಂಚಿಕೆಯ ಮುಖಪುಟದಲ್ಲಿರುವ ಈ ಫೋಟೋಗಳನ್ನು ನೋಡಿ ನಿಮಗೆ ಏನನ್ನಿಸಿತು? 100 ಶಬ್ದಗಳಿಗೆ ಮೀರದಂತೆ ಬರೆದು ನಮಗೆ ಈ–ಮೈಲ್ ಮಾಡಿರಿ. ಪ್ರತೀ ಫೋಟೋದ ಬಗ್ಗೆ ಎರಡು ಅತ್ಯುತ್ತಮ ಬರಹಗಳನ್ನು ಮುಂದಿನ "ಕೃಷಿ ಸಂಪದ"ದಲ್ಲಿ ಪ್ರಕಟಿಸುತ್ತೇವೆ.

–ಸಂಪಾದಕ

# ಹಸೆ ಚಿತ್ರಗಳು



ಮನುಷ್ಯ ಬರೆದ ಹಸೆ ಚಿತ್ರ
ಬೆಂಗಳೂರಿನ 'ದೇಸಿ' ಅಂಗಡಿಯಲ್ಲಿ ಕಂಡದ್ದು



ನಿಸರ್ಗ ಬರೆದ ಹಸೆ ಚಿತ್ರ
ಎಂ ಎಸ್ ಹೆಬ್ಬಾರರ ಕ್ಯಾಮರಾದಲ್ಲಿ ಕಂಡದ್ದು



# ವಿರಳವಾಗುತಿರುವ ಚಿತ್ರಗಳು

ಚಿಕ್ಕಂದಿನಲ್ಲಿ ನನಗೆ ನನ್ನ ಮಾವ ಟಿಲ್ಲರ್ ಉಪಯೋಗಿಸಿ ಗದ್ದೆ ಉಳುತ್ತಿದ್ದಾಗ ಅವರ ಹಿಂದೆ ಕೆಸರಿನಲ್ಲಿ ಓಡಿದ ಅಸ್ಪಷ್ಟ ನೆನಪಿದೆ. ಈಗ ನಮ್ಮ ಬಳಗದವರಲ್ಲಿ ಭತ್ತದ ಗದ್ದೆ ಉಳಿಸಿಕೊಂಡವರು ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ. ನಮ್ಮ ಊರಿನಲ್ಲಿ ಮಂಗಳೂರಿನ ಅಥವಾ ಪುತ್ತೂರಿನ ಕಡೆಗೆ ಒಮ್ಮೆ ಹೋದರೆ ರಸ್ತೆ ಬದಿಯ ಗದ್ದೆಗಳು ಒಂದೊಂದಾಗಿ ಬಂಜರಾಗುತ್ತಿರುವುದನ್ನು, ಕ್ರಮೇಣ ಅಲ್ಲಿ ಅಂಗಡಿ/ಮನೆಗಳು ಮೇಲೇಳುವುದನ್ನು ಕಾಣಬಹುದು.

ಕಳೆದ ಮಳೆಗಾಲದಲ್ಲಿ ನಾನು ಗದ್ದೆ ಬೇಸಾಯದ ಚಿತ್ರ ತೆಗೆಯಬೇಕೆಂದು ಹುಡುಕಾಡಿ ಬಂಟ್ವಾಳದ ಹತ್ತಿರದ ಗದ್ದೆಯಲ್ಲಿ ತೆಗೆದ ಚಿತ್ರಗಳಿವು.

ನಾನು ಚಿತ್ರಗಳನ್ನು ತೆಗೆಯುತ್ತಿರಬೇಕಾದರೆ ಅಲ್ಲಿನ ಕೃಷಿಕ ಇದರಲ್ಲಿ ಏನೇನೂ ಲಾಭವಿಲ್ಲವೆಂದೂ ಒಂದು ರೀತಿಯ ಅಭ್ಯಾಸ ಬಲಕ್ಕೆ ಬಿದ್ದು ಮಾಡುತ್ತಿದ್ದೇವೆಂದೂ ಹೇಳಿದ! ಅಕ್ಕಿಯ ಬೆಲೆ ಗಗನಕ್ಕೆ ಏರುತ್ತಿರಬೇಕಾದರೆ ಬೆಳೆದವರಿಗೆ ಏಕೆ ಲಾಭ ಸಿಗುತ್ತಿಲ್ಲ? ಇದು ಪೂರ್ರೈಕೆಯ ದಾರಿಯಲ್ಲಿ ಆಗುತ್ತಿರುವ ಮೋಸವೇ ಹೊರತು ಬೇರೇನೂ ಅಲ್ಲ. ಈ ಮೋಸ ಭತ್ತ ಒಂದೇ ಅಲ್ಲ, ಎಲ್ಲಾ ಬೆಳೆಗಳ ಕೃಷಿಕರ ಮೇಲೂ ನಿಷ್ಪಕ್ಷಪಾತವಾಗಿ ನಡೆಯುತ್ತಿದೆ.

ನಮ್ಮ ಬೆಳೆಗಳ ಮೌಲ್ಯವರ್ಧನೆ ಮತ್ತು ನೇರ ಮಾರಾಟದ ಬಗ್ಗೆ ಶ್ರೀಪಡ್ರೆಯಂತಹ ಚಿಂತಕರು (ಅಡಿಕೆಪತ್ರಿಕೆಯಲ್ಲಿ) ಒತ್ತಿ ಹೇಳುತ್ತಿರುವುದರ ಮಹತ್ವ ನನಗೆ ಸ್ಪಷ್ಟವಾಯಿತು.





ಚಿತ್ರ-ಲೇಖನ: **ವಸಂತ ಕಜೆ**

## ಆದಾಯಮೂಲಕೆ ಆಧಾರವಾದ ಗಿಡಮೂಲಿಕೆ

### ಹರಿಬೋಲ್ ಮಹಿಳಾ ಸ್ವಸಹಾಯ ಸಂಘದ ಯಶೋಗಾಥೆ

ಹಿಮಾಲಯದ ತಪ್ಪಲಿನಲ್ಲಿರುವ ಚತ್ತಿಸ್‌ಘರ್ ರಾಜ್ಯದ ಕೊರ್ಬ್ಬಾ ಜಿಲ್ಲೆಯ ಮೂಲೆಯ ಹಳ್ಳಿ ದೊಂಗನಾಲಾ. ರಾಜಧಾನಿ ರಾಯ್‌ಪುರದಿಂದ 160 ಕಿಮೀ ದೂರದಲ್ಲಿರುವ ದೊಂಗನಾಲಾದ ಮಹಿಳಾ ಸ್ವಸಹಾಯ ಸಂಘ ಈಗ ಸುದ್ದಿ ಮಾಡಿದೆ.

ಒಂದೇ ವರುಷದ ಅವಧಿಯಲ್ಲಿ ಸಂಘವು 15 ಲಕ್ಷ ರೂ ಆದಾಯ ಗಳಿಸಿದೆ – ಪಾರಂಪರಿಕ ಔಷಧಿಗಳ ಮಾರಾಟದಿಂದ. ಸುತ್ತಲಿನ ಅರಣ್ಯದಲ್ಲಿರುವ ಗಿಡ ಮೂಲಿಕೆಗಳಿಂದ ಔಷಧಿಗಳನ್ನು ತಯಾರಿಸುವ ಘಟಕವೊಂದನ್ನು ಅವರು ನಡೆಸುತ್ತಿದ್ದಾರೆ. ಕೃಷಿಕೂಲಿಕಾರರಾಗಿ ಬಡತನದಲ್ಲಿ ಬಳಲುತ್ತಿದ್ದವರು ಈಗ ಕೈತುಂಬ ನೋಟು ಎಣಿಸುವ ಉದ್ಯಮಶೀಲರು. "ಸಂಘದ ಸದಸ್ಯಳಾಗಿರುವ ನನಗೀಗ ನನ್ನ ಬಗ್ಗೆ ಅಭಿಮಾನವಿದೆ" ಎನ್ನುತ್ತಾಳೆ 16 ವರುಷದ ಪುಲೇಶ್ವರಿ.

ಇದನ್ನೆಲ್ಲ ಶುರು ಮಾಡಿದಾತ ಗ್ರಾಮದ ಉತ್ಸಾಹಿ ಯುವಕ ರಾಂಫಲ್ ಪಟೇಲ್. ಆತ ಉತ್ತರಖಂಡದ ಹರಿದ್ವಾರದ ಆಯುರ್ವೇದ ಸಂಸ್ಥೆ ಶಾಂತಿಕುಂಜದಲ್ಲಿ ತರಬೇತಿ ಪಡೆದ. ಅನಂತರ ಚತ್ತಿಸ್‌ಘರ್ ರಾಜ್ಯ ಸರಕಾರವು ತನ್ನ ರಾಜ್ಯವನ್ನು ಗಿಡಮೂಲಿಕೆಗಳ ಆಶ್ರಯತಾಣವೆಂದು ಪರಿಗಣಿಸಿ, ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ಆಗ, 2002ರಲ್ಲಿ, ಗಿಡಮೂಲಿಕೆಗಳನ್ನು ಗುರುತಿಸಿ ಸಂರಕ್ಷಿಸಲು ರಾಂಫಲ್ ಪಟೇಲ್ ಅರಣ್ಯ ಇಲಾಖೆಗೆ ಸಹಾಯ ಮಾಡತೊಡಗಿದ.

"ನಮ್ಮ ಹಳ್ಳಿಯ ಜನರಿಗೆ ಗಿಡಮೂಲಿಕೆಗಳ ಔಷಧೀಯ ಉಪಯೋಗ ಗೊತ್ತಿತ್ತೇ ವಿನಃ ಅವನ್ನು ಆದಾಯಮೂಲವಾಗಿ ಬಳಸುವುದು ಹೇಗೆಂದು ಗೊತ್ತಿರಲಿಲ್ಲ. ನಾನು ಅದನ್ನು ತೋರಿಸಿಕೊಟ್ಟೆ" ಎನ್ನುತ್ತಾನೆ ರಾಂಫಲ್.

ದೊಂಗನಾಲಾದಲ್ಲಿ ಗಿಡಮೂಲಿಕಾ ಔಷಧಿಗಳ ತಯಾರಿ ಆರಂಭವಾದದ್ದು 2006ರಲ್ಲಿ. ಇಪ್ಪತ್ತು ಮಹಿಳೆಯರು ಒಟ್ಟಾಗಿ "ಹರಿಬೋಲ್ ಸ್ವಸಹಾಯ ಸಂಘ" ಸ್ಥಾಪಿಸಿದರು. ಇವರಿಗೆ ರಾಂಫಲ್ ಪಟೇಲನ ಮಾರ್ಗದರ್ಶನ. ಪ್ರತಿಯೊಂದು ಔಷಧಿಯಲ್ಲಿ ಯಾವ್ಯಾವ ಮೂಲಿಕೆಗಳನ್ನು ಯಾವ್ಯಾವ ಪ್ರಮಾಣದಲ್ಲಿ ಬೆರೆಸಬೇಕು ಎಂದು ರಾಂಫಲ್‌ನಿಂದ ಮಹಿಳೆಯರಿಗೆ ತರಬೇತಿ. ಸಂಘದ ಮಹಿಳೆಯರು ಕೆಲವು ಗಿಡಮೂಲಿಕೆಗಳನ್ನು ಕಾಡಿನಿಂದ ಸಂಗ್ರಹಿಸುತ್ತಾರೆ ಹಾಗೂ ಇನ್ನು ಕೆಲವನ್ನು ತಮ್ಮ ನರ್ಸರಿಯಲ್ಲಿ ಬೆಳೆಸುತ್ತಾರೆ. ಅವನ್ನು ಸಂಸ್ಕರಿಸಿ, ಔಷಧಿ ತಯಾರಿಸಿ, ಪ್ಯಾಕ್ ಮಾಡಿ ಮಾರುತ್ತಾರೆ.

ಬೇಡಿಕೆಯನ್ನು ಆಧರಿಸಿ, ಸ್ವಸಹಾಯ ಸಂಘವು 30 ವಿವಿಧ ಔಷಧಿ ಹಾಗೂ ಉತ್ಪನ್ನಗಳನ್ನು ಉತ್ಪಾದಿಸಲು ಆರಂಭಿಸಿತು. ಶೀತ, ಸಕ್ಕರೆಕಾಯಿಲೆ, ಅಜೀರ್ಣ ಮತ್ತು ಗಂಟುನೋವಿಗೆ ಔಷಧಿಗಳು; ಚ್ಯವನಪ್ರಾಶ, ಜೇನು, ಗಿಡಮೂಲಿಕಾ ಟೀ, ಮುಖಕ್ಕೆ ಹಚ್ಚುವ ಕ್ರೀಂ, ಟೂತ್‌ಪೇಸ್ಟ್ ಇತ್ಯಾದಿಗಳಿಗೆ ಈಗ ಬಹಳ ಬೇಡಿಕೆ. "ಇವನ್ನೆಲ್ಲ ನೋಂದಾಯಿತ ಆಯುರ್ವೇದ ಚಿಕಿತ್ಸಕರೊಬ್ಬರು ಸರ್ಟಿಫೈ ಮಾಡಿದ ಬಳಿದ ಸರಕಾರದ ಪ್ರಯೋಗಾಲಯ ಅನುಮೋದಿಸುತ್ತದೆ" ಎನ್ನುತ್ತಾನೆ ರಾಂಫಲ್. ಸ್ವಸಹಾಯ ಸಂಘದ "ಯಜ್ಞ" ಬ್ರಾಂಡ್ ಉತ್ಪನ್ನಗಳ ಮಾರಾಟ ತಿಂಗಳಿಗೆ 1,100 ಕಿಲೋಗ್ರಾಂ. "ನಾವೀಗ ಸ್ವಾವಲಂಬಿಗಳು" ಎನ್ನುವ ಸಂಘದ ಕಾರ್ಯದರ್ಶಿ ಉಮಾ ಯಾದವರ ಮಾತಿನಲ್ಲಿ ವಿಶ್ವಾಸ ತುಂಬಿದೆ.

ಹರಿಬೋಲ್ ಸ್ವಸಹಾಯ ಸಂಘದ ಸಾಧನೆಯಲ್ಲಿ ಸರಕಾರದ ಸಹಾಯವೂ ಮಹತ್ವದ್ದು. ರಾಜ್ಯದ ಗಿಡಮೂಲಿಕಾ ಔಷಧಿ ಮಂಡಲಿಯಿಂದ ಸಂಘಕ್ಕೆ ರೂಪಾಯಿ 1.2 ಲಕ್ಷ ಹಣ ಸಹಾಯ. ಸಂಘದ ವ್ಯವಹಾರ ಹೆಚ್ಚಿದಂತೆ, ಅರಣ್ಯ ಇಲಾಖೆಯೂ ಬೆಂಬಲ ನೀಡಿತು. ಒಂದು ಡ್ರೈಯರ್, ಒಂದು ಹುಡಿಮಾಡುವ ಯಂತ್ರ ಒದಗಿಸಿತು; ಪ್ಯಾಕ್ ಮಾಡಲಿಕ್ಕಾಗಿ ಕಟ್ಟಡವನ್ನೂ ನಿರ್ಮಿಸಿ ಕೊಟ್ಟಿತು.

ಇದೆಲ್ಲದರ ಪರಿಣಾಮವಾಗಿ ಉತ್ತಮ ಆದಾಯ ಗಳಿಸಿದ ಸಂಘ ತನ್ನದೇ ಹಣದಿಂದ 5 ಲಕ್ಷ ರೂ ವೆಚ್ಚದಲ್ಲಿ ಟ್ರಾನ್ಸಫಾರ್ಮರ್ ಹಾಕಿಸಿಕೊಂಡಿದೆ.

ಮೂರು ಮಹಿಳಾ ಸ್ವಸಹಾಯ ಸಂಘಗಳ ಯಶಸ್ಸು ಇತರರಿಗೂ ಉತ್ತೇಜನ ನೀಡಿದೆ. ಹರಿಬೋಲ್ ಮಹಿಳಾ ಸ್ವಸಹಾಯ ಸಂಘದ ಯಶೋಗಾಥೆಯಿಂದ ಪ್ರೇರಿತರಾದ ಗ್ರಾಮೀಣ ಜನರು ಅದೇ ಹಳ್ಳಿಯಲ್ಲಿ ಇನ್ನೆರಡು ಸ್ವಸಹಾಯ ಸಂಘ ಸ್ಥಾಪಿಸಿ, ಉತ್ಪಾದನೆಗೆ ತೊಡಗಿದ್ದಾರೆ. ಒಂದು ಸಂಘ ಕರಕುಶಲ ವಸ್ತುಗಳ ತಯಾರಿ ಹಾಗೂ ಇನ್ನೊಂದು ಸಂಘ ಎರೆಹುಳಗೊಬ್ಬರ ತಯಾರಿ ಆರಂಭಿಸಿವೆ. ಗ್ರಾಮೀಣ ಭಾರತದಲ್ಲಿ ಬಡತನದ ಬೇಗೆಯನ್ನು ದೂರ ಮಾಡಲು ಸಾಧ್ಯವಿದೆ ಎಂದು ಈ ಸ್ವಸಹಾಯ ಸಂಘಗಳು ತೋರಿಸಿಕೊಟ್ಟಿವೆ.

ಕೃಷಿಕಾಯಕದಲ್ಲಿ ಹಣ್ಣಾದವರು। ಚೇರ್ಕಾಡಿ ರಾಮಚಂದ್ರ ರಾವ್

# ಸುಸ್ಥಿರ ಕೃಷಿಯ ಹರಿಕಾರ



ಚೇರ್ಕಾಡಿ ರಾಮಚಂದ್ರರಾಯರ ಹೆಸರು ಮತ್ತೆ ಮತ್ತೆ ಕೇಳಿ ಬರುತ್ತದೆ – ಸುಸ್ಥಿರ ಕೃಷಿಯ ಮಾತು ಬಂದಾಗೆಲ್ಲ.

ಅವರ ಮಣ್ಣಿನ ಅನುಭವದ ಮಾತು ಕೇಳುತ್ತಿದ್ದಂತೆ ಕೃಷಿಕಾಯಕದಲ್ಲಿ ಹಣ್ಣಾದ ಅವರ ಬದುಕಿನ ಕತೆ ಕಣ್ಣಿಗೆ ಕಟ್ಟುತ್ತಿತ್ತು. ಅಂದು ಮಧ್ಯಾಹ್ನದ ಉರಿಬಿಸಿಲಿನಲ್ಲಿ ಅವರ ಮನೆ ತಲಪಿ, ಅವರೆದುರು ಕುಳಿತಾಗ ನನ್ನ ದಣಿವನ್ನೆಲ್ಲ ಕರಗಿಸಿದ್ದು ಅವರ ನೆರಿಗೆದುಂಬಿದ ಮುಖದಲ್ಲಿ ಅರಳಿದ ನಗು ಮತ್ತು ಲವಲವಿಕೆಯ ಮಾತು.

"ಇದೆಲ್ಲ ಶುರುವಾದದ್ದು ಹೇಗೆ, ರಾಮಚಂದ್ರ ರಾಯರೇ?" ಎಂದು ಕೇಳಿದಾಗ ಐದು ದಶಕಗಳ ಮುಂಚಿನ ದಿನಗಳನ್ನು ಮೆಲುಕು ಹಾಕಿದರು. "ಮಹಾತ್ಮ ಗಾಂಧಿಯವರ ತತ್ವ ಮನಸ್ಸಿಗೆ ನಾಟಿತ್ತು. ಆ ರೀತಿ ಬದುಕಬೇಕಂತ ನಿರ್ಧರಿಸಿದೆ" ಎಂದು ಮಾತು ಆರಂಭಿಸಿದರು. "ಚರಕ ಸುತ್ತಿ ನೂಲು ತೆಗಿತಾ ಇದ್ದೆ. ಕೆಲವು ವರುಷ ಹಾಗೇ ನಡೀತು. ಆದ್ರೆ ಅದ್ರಿಂದಲೇ ಜೀವನ ಮಾಡಕ್ಕೆ ಆಗಲ್ಲ ಅನ್ನೋದು ಗೊತ್ತಾಯ್ತು. ಯಾರಿಗೂ ಭಾರ ಆಗಬಾರದು, ಸ್ವಾವಲಂಬಿಯಾಗಿ ಬದುಕಬೇಕು. ಹೇಗೆ? ಅನ್ನೋದೇ ನಂಗೆ ಯೋಚನೆ. ಆಗ ಗಾಂಧೀಜಿ ಹೇಳಿದ್ದು ನೆನಪಾಯಿತು. ಅನ್ನ–ವಸ್ತ್ರ ಎರಡರಲ್ಲೂ ಸ್ವಾವಲಂಬಿ ಆಗಬೇಕು. ನಾನು ವಸ್ತ್ರ ಮಾತ್ರ ಮಾಡ್ತಿದ್ದೆ. ನನ್ನ ಅನ್ನಕ್ಕಾಗಿ ನಾನೇ ಭತ್ತ ಬೆಳೀಬೇಕು ಅಂತ ತೀರ್ಮಾನ ಮಾಡಿದೆ. ನನ್ನ ಭಾವನ ಎರಡೂವರೆ ಎಕರೆ ಜಾಗ ಇತ್ತು. ಅವರನ್ನು ಕೇಳಿ ಗೇಣಿಗೆ ತಗೊಂಡೆ. ಹೆಂಡತಿ ಜೊತೆ ಇಲ್ಲಿಗೆ ಬಂದೆ. ನಾವಿಬ್ಬರೂ ದುಡಿದು ಮಾಡಿದ್ದು ಈ ತೋಟ."

ಅದು ಗುಡ್ಡದ ಜಾಗ. ಮೇಲೆ ಐದಡಿ ಮಣ್ಣು. ಕೆಳಭಾಗ ಗಟ್ಟಿ ಜಂಬಿಟ್ಟಿಗೆ ಮಣ್ಣು. ಅಲ್ಲಿ ಕಷ್ಟಪಟ್ಟು ಒಂದು ಬಾವಿ ತೋಡಿದರು. ನೀರು ಸಿಕ್ಕಿತು. ಬಾವಿಯಿಂದ ನೀರು ಎತ್ತಿ ಎತ್ತಿ ಹಾಕಿ ಎದೆನೋವು ಬಂದಾಗ ಆತಂಕ. ವೈದ್ಯರಿಗೆ ತೋರಿಸಿದರೆ "ಏನೂ ತೊಂದರೆ ಇಲ್ಲ" ಎಂದರು. ಕೊನೆಗೆ ಮಂಗಳೂರಿನ ಡಾ. ಶಾಸ್ತ್ರಿಗಳಿಗೆ ತೋರಿಸಿದರು. ಅವರು ನಾಡಿ ನೋಡಿ, "ಏನು ಕೆಲಸ ಮಾಡ್ತೀಯಾ?" ಎಂದು ಕೇಳಿದರು. ಇವರ ಉತ್ತರ ಕೇಳಿ, ವಿಪರೀತ ಕೆಲಸ ಮಾಡಬಾರದೆಂದು ತಾಕೀತು ಮಾಡಿದರು.

ಬಾವಿಯಿಂದ ನೀರೆತ್ತಲು ಚರಕದ ಚಕ್ರವನ್ನೇ ದೊಡ್ಡದು ಮಾಡಿ, ಬಾವಿಗೆ ರಾಟೆಯಂತೆ ಅಳವಡಿಸಿದರೆ ಹೇಗೆ? ಎಂಬ ಯೋಚನೆ ಮೂಡಿತು. ಬಡಗಿಯನ್ನು ಕರೆಸಿ ತಮ್ಮ ಕಲ್ಪನೆಯ ರಾಟೆ ಮಾಡಿಸಿದರು, ಕೇವಲ 20 ರೂಪಾಯಿ ವೆಚ್ಚದಲ್ಲಿ. ಅದೇ ಸರ್ವೋದಯ ರಾಟೆ. ಅದರಿಂದ ಐದು ದಶಕಗಳ ಕಾಲ ಬಾವಿಯಿಂದ ನೀರು ಮೊಗೆದು ಮೊಗೆದು ತಮ್ಮ ಗಿಡಗಳಿಗೆ ಉಣಿಸಿದರು ರಾಯರು. ಈ ನಡುವೆ ಒಂದೇ ಒಂದು ಸಲ 200 ರೂಪಾಯಿ ವೆಚ್ಚದಲ್ಲಿ ರಾಟೆಯನ್ನು ರಿಪೇರಿ ಮಾಡಿಸಿದ್ದುಂಟು.

ರಾಮಚಂದ್ರರಾಯರ ರಾಟೆಯನ್ನು ಪಂಪ್ ಸೆಟ್ಟಿಗೆ ಹೋಲಿಸಿ ನೋಡಿರಿ. ಮಾನವ ಶಕ್ತಿಯಿಂದ ತಿರುಗುವ ಈ ರಾಟೆ ಉಳಿಸಿದ ವೆಚ್ಚ ಅಗಾಧ. ಮಾತ್ರವಲ್ಲ, ಇದು ಬಾವಿಯನ್ನು ಯಾವತ್ತೂ ಬರಿದು ಮಾಡಲಿಲ್ಲ. ಆದರೆ ಕೊಳವೆಬಾವಿಯೊಳಗೆ ನೂರಿನ್ನೂರು ಅಡಿಗಳ ಆಳಕ್ಕೆ ಇಳಿಸಿದ ಸಬ್‌ಮರ್ಸಿಬಲ್ ಪಂಪ್ ಹೀಗಲ್ಲ. ಅದು ನೆಲದಾಳದ ನೀರನ್ನು ಬರಿದು ಮಾಡಿ, 3–4 ವರುಷಗಳಲ್ಲೇ ಬಾವಿಯನ್ನು ಬತ್ತಿಸುತ್ತದೆ. ನಮ್ಮ ಗ್ರಾಮಗಳಿಗೆ ಬೇಕಾಗಿರುವುದು ಸರ್ವೋದಯ ರಾಟೆಯ ತಂತ್ರಜ್ಞಾನ ಎಂಬುದು ರಾಯರ ಪ್ರತಿಪಾದನೆ. (ಆರು ವರುಷಗಳಿಂದೀಚೆಗೆ ಅವರು ನೀರೆತ್ತಲು ರಾಟೆ ಬಳಸುತ್ತಿಲ್ಲ, ನಿಜ. ಯಾಕೆಂದರೆ ಅವರಿಗೆ ವಯಸ್ಸಾಗಿದೆ. ಆದರೆ ರಾಟೆಯಿಂದಲೇ ಐವತ್ತು ವರುಷ ನೀರೆತ್ತಿಯೂ ಅವರು ಬಾವಿ ಉಳಿಸಿಕೊಂಡದ್ದೂ ನಿಜ.)

**ಸ್ವಾವಲಂಬಿಯಾಗಿ ಬದುಕಬೇಕು. ಹೇಗೆ ಅನ್ನೋದೇ ಯೋಚನೆ.**

ಗುಡ್ಡದ ಬಂಜರು ಭೂಮಿಯಲ್ಲಿಯೂ ಹುಲುಸಾಗಿ ಭತ್ತ ಬೆಳೆಸಲು ರಾವಚಂದ್ರರಾಯರು ರೂಪಿಸಿದ ವಿಧಾನ "ಚೇರ್ಕಾಡಿ ಭತ್ತದ ಕೃಷಿ ವಿಧಾನ." ಇದು ಏರಿಯಲ್ಲಿ ಭತ್ತ ಬೆಳೆಸುವ ಕ್ರಮ. ರಾಯರ ಲೆಕ್ಕಾಚಾರ ಸರಳ. 10 ಸೆಂಟ್ಸ್ ಜಾಗದಲ್ಲಿ 9 ಇಂಚು ಅಗಲದ 15 ಅಡಿ ಉದ್ದದ 160 ಏರಿ ಮಾಡಿ, 8 ಇಂಚು ಅಂತರದಲ್ಲಿ ಎರಡೆರಡು ಸಸಿ ನೆಟ್ಟರಾಯಿತು. ನಾಟಿ ಮಾಡುವಾಗ ಸೆಗಣಿ ನೀರು ಅಥವಾ ಹಟ್ಟಿ ಗೊಬ್ಬರ ಹಾಕಿ, ಅನಂತರ ಮೂರ್ನಾಲ್ಕು ದಿನಗಳಿಗೊಮ್ಮೆ ನೀರು ಕೊಡುತ್ತಿದ್ದರೆ ಸಾಕು. ಪುಳ್ಳೆ ಒಡೆದಾಗ ಇನ್ನೊಮ್ಮೆ ಹಟ್ಟಿ ಗೊಬ್ಬರ ಹಾಕಬೇಕು.ಇಷ್ಟೇ ಜಾಗದಿಂದ, 4 – 5 ಆಳು ಕೆಲಸದಿಂದ ಒಬ್ಬ ವ್ಯಕ್ತಿಗೆ ಒಂದು ವರುಷದ ಊಟಕ್ಕೆ ಬೇಕಾದಷ್ಟು ಭತ್ತ ಬೆಳೆಯಬಹುದು. "ಇದು ಇಷ್ಟು ಸುಲಭ. ಆದರೆ ನಮ್ಮ ರೈತರು ಯಾಕೆ ಹೀಗೆ ಭತ್ತ ಬೆಳೆಸೋದಿಲ್ಲ" ಎಂಬ ಪ್ರಶ್ನೆ ರಾಯರದು.



"ಭತ್ತ, ತರಕಾರಿ ಮಾತ್ರ ಬೆಳೀತಾ ಇದ್ರೆ ಮುದಿ ವಯಸ್ಸಿನಲ್ಲಿ ಕಷ್ಟ ಆದೀತು ಅಂತ ಗೊತ್ತಿತ್ತು. ಅದಕ್ಕಾಗಿ ವರ್ಷಾನುಗಟ್ಟಲೆ ಫಲ ಕೊಡುವ ಗಿಡಗಳನ್ನು ನೆಟ್ಟೆ. ಅವೆಲ್ಲ ಈಗ ಫಲ ಕೊಡ್ತಿವೆ. ಬನ್ನಿ ಮಾರಾಯರೇ, ನೋಡುವಾ" ಎಂದು ತಮ್ಮ ಕರ್ಮಭೂಮಿಗೆ ಕರೆದೊಯ್ದರು. ಅವರ ಲವಲವಿಕೆ ನನ್ನನ್ನು ಬಡಿದೆಬ್ಬಿಸಿತು.

ಅಲ್ಲಿ ತೆಂಗು, ಬಾಳೆ, ಕರಿಮೆಣಸು, ಅನಾನಸು, ಪಪ್ಪಾಯಿ ಎಲ್ಲವೂ ಇವೆ. ನೆಲದೊಳಗೆ ಅರಾರೋಟು, ಮರಗೆಣಸು, ಶುಂಠಿ ಗೆಡ್ಡೆಗಳು. "ನನಗೆ ಭೂಮಿತಾಯಿ ಎಲ್ಲ ಕೊಟ್ಟಿದ್ದಾಳೆ. ಇಲ್ಲಿ ನಾನು ಎಣಿಸಿದ್ದೆಲ್ಲ ಆಗಿದೆ ಮಾರಾಯ್ರೇ" ಎಂದು ರಾಯರು ಹೇಳೋದನ್ನು ಕೇಳ್ತಾ, ಒಂದೊಮ್ಮೆ ಬಂಜರಾಗಿದ್ದ ಆ ಭೂಮಿ ನಗುತ್ತಿತ್ತು.

ಕಡಿಮೆ ನೀರಿನಿಂದ, ಯಂತ್ರಗಳ ಅವಲಂಬನೆಯಿಲ್ಲದೆ ಕೃಷಿ ಮಾಡಿದರೆ ಸಾಲ ಆಗೋದಿಲ್ಲ. ವರುಷದಿಂದ ವರುಷಕ್ಕೆ ಉಳಿತಾಯ ಠೇವಣಿ ಹೆಚ್ಚುತ್ತದೆ ಎಂಬುದನ್ನು ಸಾಧಿಸಿ ತೋರಿಸಿದ್ದಾರೆ ರಾಮಚಂದ್ರರಾಯರು. ನಮ್ಮ ದೇಶದ ಆರು ಲಕ್ಷ ಹಳ್ಳಿಗಳ ಉದ್ಧಾರಕ್ಕೆ ಏನು ಮಾಡಬೇಕೆಂಬ ಮಾದರಿ ಚೇರ್ಕಾಡಿಯಲ್ಲಿದೆ. "ಇಂದಿನ ಯೋಜನೆಗಳು ಹಳ್ಳಿ ಜನರನ್ನು ಗುಲಾಮರನ್ನಾಗಿ ಮಾಡ್ತಿವೆ, ಸ್ವಾವಲಂಬಿಗಳನ್ನಾಗೆ ಮಾಡ್ತಿಲ್ಲ" ಎಂಬ ಅವರ ಮಾತಿನ ನೋವು ನಮಗೆ ತಟ್ಟುತ್ತದೆ.

ಎರಡೂವರೆ ತಾಸುಗಳಲ್ಲಿ ತನ್ನ ಸಾಧನೆಗಳ ದರ್ಶನ ಮಾಡಿಸಿದ ರಾಮಚಂದ್ರರಯರ ಬದುಕು ದೊಡ್ಡದು. ತನ್ನ ಮುಗ್ಧತೆ, ಸಂತೃಪ್ತಿ, ಲವಲವಿಕೆಗಳನ್ನು ಬಂದವರಿಗೆಲ್ಲ ಹಂಚುವ ಅವರ ಜೀವನೋತ್ಸಾಹ ಅದಕ್ಕಿಂತ ದೊಡ್ಡದು. (ರಾಮಚಂದ್ರರಾಯರ ವಿಳಾಸ: ಚೇರ್ಕಾಡಿ, (ದ್ವಾರಾ) ಬ್ರಹ್ಮಾವರ, ಉಡುಪಿ ಜಿಲ್ಲೆ)

## ಮರೆಯಲಾಗದ ಕ್ರಾಂತಿಪುರುಷ

# ನಾರ್ಮನ್ ಬೋರ್ಲಾಗ್

1973–74ರ ಒಂದು ದಿನ. ಕೃಷಿ ವಿಶ್ವವಿದ್ಯಾನಿಲಯದ ಹೆಬ್ಬಾಳದ ಸಭಾಗೃಹದಲ್ಲಿ ಕಿಕ್ಕಿರದ ಜನ – ಹಸುರು ಕ್ರಾಂತಿಯ ಹರಿಕಾರ. ಡಾ. ನಾರ್ಮನ್ ಬೋರ್ಲಾಗರ ಮಾತು ಕೇಳಲಿಕ್ಕಾಗಿ.

ಅಂದು, ಡಾ. ಬೋರ್ಲಾಗ್ ಎಚ್ಚರಿಕೆಯ ಮಾತುಗಳನ್ನು ಹೇಳಿದ್ದರು, "ಹೈಬ್ರಿಡ್ ತಳಿಗಳು ರಾಕ್ಷಸರಿದ್ದಂತೆ – ಅವುಗಳಿಗೆ ದೊಡ್ಡ ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರಗಳನ್ನು ಉಣಿಸಬೇಕು. ಇಲ್ಲವಾದರೆ ಕನಿಷ್ಠ ಪ್ರಮಾಣದ ಫಸಲು ಸಿಗದೆ ಹೋದೀತು". ಹೆಬ್ಬಾಳದ ಕೃಷಿ ಕಾಲೇಜಿನಲ್ಲಿ ನಾನಾಗ ಬಿ ಎಸ್ಸಿ. (ಅಗ್ರಿ) ಮೊದಲ ವರ್ಷದ ವಿದ್ಯಾರ್ಥಿ. ಡಾ. ಬೋರ್ಲಾಗರ ಮಾತಿನ ಆಳ–ಅಗಲ, ನಮಗಾಗ ಅರ್ಥವಾಗಿರಲಿಲ್ಲ. ಅಲ್ಲಿ ನೆರೆದಿದ್ದ ಕೃಷಿ ಇಲಾಖೆಯ ಅಧಿಕಾರಿಗಳಿಗೆ ಹಾಗೂ ಕೃಷಿ ವಿಜ್ಞಾನಿಗಳಿಗೆ ಆ ಮಾತು ಎಷ್ಟರಮಟ್ಟಿಗೆ ಅರ್ಥವಾಯಿತೋ? ವರ್ಷಗಳು ಉರುಳಿದಂತೆ, ಹಸುರು ಕ್ರಾಂತಿಯ ಅಬ್ಬರ ಇಳಿದಂತೆ, ಕೃಷಿಕರಿಗಂತೂ ಆ ಮಾತು ಚೆನ್ನಾಗಿ ಅರ್ಥವಾಯಿತು.

ಏಕೆಂದರೆ, ವರುಷವರುಷವೂ ಮಣ್ಣಿಗೆ ಯೂರಿಯ, ಸೂಪರ್ ಫಾಸ್ಫೇಟ್ ಇತ್ಯಾದಿ ರಾಸಾಯನಿಕ ಗೊಬ್ಬರ ಸುರಿದದ್ದರಿಂದ ಮಣ್ಣಿನ ಸೂಕ್ಷ್ಮ ಲೋಕವೇ ಬದಲಾಯಿತು. ಇದರ ದುಷ್ಪರಿಣಾಮಗಳು ಹಲವು.. ಮಣ್ಣಿನ ಆರೋಗ್ಯಕ್ಕೆ ಕಾರಣವಾದ ಸೂಕ್ಷ್ಮ ಜೀವಿಗಳ ನಾಶ; ಇದರಿಂದಾಗಿ ಮಣ್ಣಿನಲ್ಲಿ ಜೈವಿಕ ಕ್ರಿಯೆ ಕಡಿಮೆ. ಹೊಲಗದ್ದೆಗಳಿಗೆ, ತೋಟಗಳಿಗೆ ಹಟ್ಟಿಗೊಬ್ಬರ ಹಾಗೂ ಹಸುರೆಲೆ ಗೊಬ್ಬರ ಹಾಕುವ ಪರಿಪಾಠ ತಪ್ಪಿತು; ಹಾಗಾಗಿ ಮಣ್ಣಿನಲ್ಲಿ ಸೂಕ್ಷ್ಮ ಪೋಷಕಾಂಶಗಳ ಕೊರತೆ. ಒಟ್ಟಾರೆ ಮಣ್ಣಿನ ಫಲವತ್ತತೆ ಕುಂಠಿತ. ಕೃಷಿಕರಂತೂ ರಾಸಾಯನಿಕ ಗೊಬ್ಬರ ಬಳಸುವ ಪರಿಪಾಠ ಬೆಳೆಸಿಕೊಂಡರು. ಆದರೆ ಅವುಗಳ ಬೆಲೆ ಏರುತ್ತ ಹೋದಂತೆ ಅವುಗಳನ್ನು ವಿಜ್ಞಾನಿಗಳು ಸೂಚಿಸಿದ ಪ್ರಮಾಣದಲ್ಲಿ ಹೈಬ್ರಿಡ್ ತಳಿಗಳಿಗೆ ಒದಗಿಸಲು ಸಾಧ್ಯವಾಗಲಿಲ್ಲ. ಫಸಲು ಇಳಿಕೆಯಾಗಿ ಕೃಷಿಕರ ಆದಾಯವೂ ಕುಗ್ಗಿತು.



ಅದೇನಿದ್ದರೂ ವೇಗವಾಗಿ ಬೆಳೆಯುತ್ತಿರುವ ಜನಸಂಖ್ಯೆಯ ಆಹಾರಬೇಡಿಕೆ ಪೂರೈಸಲು ಹಸುರುಕ್ರಾಂತಿ ಸಹಾಯ ಮಾಡಿದ್ದಂತೂ ನಿಜ. ಇದರಿಂದಾಗಿ ಜಗತ್ತಿನ ಬಡದೇಶಗಳಲ್ಲಿ ಹಸಿದ ಜನರ ಹಾಹಾಕಾರ ಹಬ್ಬಲಿಲ್ಲ. ಹಸುರುಕ್ರಾಂತಿಯ ಆರಂಭದ ವರುಷಗಳಲ್ಲಿ, 1965–70ರಲ್ಲಿ ಭಾರತ ಹಾಗು ಪಾಕಿಸ್ತಾನದಲ್ಲಿ ಗೋಧಿಯ ಉತ್ಪಾದನೆ ಇಮ್ಮಡಿಯಾಯಿತು. ಜಗತ್ತಿನಲ್ಲಿ ಆಹಾರ ಉತ್ಪಾದನೆ ಹೆಚ್ಚಿಸುವುದಕ್ಕೆ ನೀಡಿದ ಕೊಡುಗೆಗಾಗಿ ಡಾ. ನಾರ್ಮನ್ ಬೋರ್ಲಾಗರಿಗೆ 1970ರಲ್ಲಿ ನೊಬೆಲ್ ಪ್ರಶಸ್ತಿ ನೀಡಲಾಯಿತು. ಯೂಎಸ್ಎ ದೇಶದ ಟೆಕ್ಸಾಸ್ ಎ ಎಂಡ್ ಎಂ ವಿಶ್ವವಿದ್ಯಾಲಯದ ಪ್ರೊಫೆಸರ್ ಆಗಿದ್ದ ಬೋರ್ಲಾಗ್ ಸೆಪ್ಟೆಂಬರ್ 2009ರ ಎರಡನೇ ವಾರದಲ್ಲಿ ನಮ್ಮನ್ನು ಅಗಲಿದರು. ಅವರಿಗಾಗ 95 ವರ್ಷ ವಯಸ್ಸು.

ಮಾನವಕುಲದ ವಿಕಾಸದ ಚರಿತ್ರೆಯಲ್ಲಿ ಬೋರ್ಲಾಗರಿಗೊಂದು ಶಾಶ್ವತ ಸ್ಥಾನ. ಇತ್ತೀಚೆಗೆ ಟೆಕ್ಸಾಸ್ ವಿಶ್ವವಿದ್ಯಾಲಯದ ವೆಬ್ಸೈಟಿನಲ್ಲಿ ಪ್ರಕಟವಾದ ಅವರ ಮಾತುಗಳು ಮಾನವ ಕುಲದ ಬಗ್ಗೆ ಅವರ ಕಾಳಜಿಯ ಪ್ರತೀಕ.. "ಈ ಜಗತ್ತಿನಲ್ಲಿ ಭಾರೀ ಪ್ರಗತಿ ಆಗಿದೆ. ಆಹಾರದ ಹಂಚುವಿಕೆ ಹೆಚ್ಚು ನ್ಯಾಯ ಸಮ್ಮತವಾಗಿದೆ. ಆದರೆ ಹಸಿವು ವ್ಯಾಪಕವಾಗಿದೆ ಮತ್ತು ಬರಗಾಲ ನಮ್ಮನ್ನು ಆಗಾಗ ಕಾಡುತ್ತಿದೆ".

– ಕೃಷ್ಣರಾವ್

## ಡಿಜಿಟಲ್ ಲೋಕದಿಂದ

padvalagriculture.blogspot.com

# ಬಿಳಿನೊಣಕ್ಕೆ ಬಲೆ

ತರಕಾರಿ ಗಿಡಗಳಾದ ಬದನೆ, ದೊಣ್ಣೆ ಮೆಣಸಿನಕಾಯಿ, ಮೆಣಸಿನಕಾಯಿ, ಟೊಮೆಟೊ ಹಾಗೂ ಕೆಲವು ಸೊಪ್ಪಿನ ಗಿಡಗಳಿಗೆ ಬಿಳಿ ನೊಣದ ಬಾಧೆ ಸಾಮಾನ್ಯ. ಇಡೀ ಗಿಡಕ್ಕೆ ಬಿಳಿ ಧೂಳಿನಂತೆ ಆವರಿಸಿಕೊಳ್ಳುವ ಈ ನೊಣದ ಹಾವಳಿ ತಡೆಗೆ ರೈತರು ನಾನಾ ಪ್ರಯತ್ನ ಮಾಡುತ್ತಾರೆ. ಮೆಲಾಥಿನ್‌ನಂಥ ತೀವ್ರ ವಿಷಕಾರಿ ಪುಡಿಯನ್ನು ಧೂಳೀಕರಣ ಮಾಡುತ್ತಾರೆ. ಇದರಿಂದ ಹುಳುಗಳು ಸಾಯುವ ಪ್ರಮಾಣ ತೀರಾ ಕಡಿಮೆ. ಏಕೆಂದರೆ, ಹುಳು ಇರುವೆಡೆಯಲ್ಲೆಲ್ಲ ಮೆಲಾಥಿನ್ ಪುಡಿ ತಲುಪುವುದು ಸುಲಭವಲ್ಲ. ಅಲ್ಲದೇ, ಇದಕ್ಕೆ ಖರ್ಚು ಹೆಚ್ಚು, ಕೂಲಿಗಳು ಹೆಚ್ಚು ಸಂಖ್ಯೆಯಲ್ಲಿ ಬೇಕಾಗುತ್ತಾರೆ. ಎಲ್ಲಕ್ಕಿಂತ ಮುಖ್ಯವಾಗಿ ಗಿಡಗಳಿಗೆ ಉಣಿಸಿದ ವಿಷದ ಅಡ್ಡಪರಿಣಾಮಗಳಿಂದ ತಪ್ಪಿಸಿ ಕೊಳ್ಳುವುದು ಸಾಧ್ಯವಿಲ್ಲ.

ಇಂಥ ಬಿಳಿ ನೊಣಗಳ ತಡೆಗೆ ಮಂಗಳೂರಿನ ಪ್ರಗತಿಪರ ಕೃಷಿಕರೊಬ್ಬರು (http://padvalagriculture.blogspot.com) ಅತ್ಯಂತ ಸರಳ ಹಾಗೂ ಪರಿಸರಸ್ನೇಹಿ ವಿಧಾನವನ್ನು ಆವಿಷ್ಕರಿಸಿದ್ದಾರೆ.

ಅವರು ಬಳಸಿದ ವಿಧಾನ ಹೀಗಿದೆ:

– ಬಳಸಿ ಎಸೆಯುವಂಥ ರಟ್ಟಿನ ಡಬ್ಬವನ್ನು ತೆಗೆದುಕೊಳ್ಳಿ.



– ಅದನ್ನು ಮಡಿಸಿ ಚಪ್ಪಟೆ ಮಾಡಿ.

– ಮಾರುಕಟ್ಟೆಯಲ್ಲಿ ಸಿಗುವ ಡಬ್ಬದ ಗಾತ್ರಕ್ಕೆ ಸರಿ ಹೋಗುವ ಅಗಲದ ಹಳದಿ ಬಣ್ಣದ ಪ್ಲಾಸ್ಟಿಕ್ ಹಾಳೆಯನ್ನು ತನ್ನಿ.

– ಈ ಹಾಳೆಯನ್ನು ಚಪ್ಪಟೆ ಮಾಡಿದ ರಟ್ಟಿನ ಡಬ್ಬಕ್ಕೆ ಹೊದಿಸಿ, ಎಲ್ಲ ಕಡೆ ಸ್ಟ್ಯಾಪ್ಲರ್‌ನಿಂದ ಬಂಧಿಸಿ. ಸೂಜಿ–ದಾರ ಬಳಸಿ ಅಲ್ಲಲ್ಲಿ ಚುಟುಕು ಹೊಲಿಗೆ ಹಾಕಿದರೂ ಪರವಾಗಿಲ್ಲ.

– ನಂತರ, ಒಂದು ಚಹ–ಚಮಚದಷ್ಟು ಅಡುಗೆ ಎಣ್ಣೆಯನ್ನು ಪ್ಲಾಸ್ಟಿಕ್ ಹಾಳೆಯ ಎರಡೂ ಬದಿಗೆ ಸವರಿ.

– ಈಗ ಬಿಳಿನೊಣದ ಬಲೆಯನ್ನು ನಿಮ್ಮ ತರಕಾರಿ ಬೆಳೆಯ ನಡುವೆ ಗಾಳಿಗೆ ಅಲ್ಲಾಡದಂತೆ ಭದ್ರವಾಗಿ ನೆಡಿ.

ಒಂದು ದಿನದೊಳಗೆ ಇಡೀ ಪ್ಲಾಸ್ಟಿಕ್ ಹಾಳೆಯ ಉದ್ದಗಲಕ್ಕೆ ಸಣ್ಣ ಸಣ್ಣ ಬಿಳಿಯ ಪದಾರ್ಥ ಅಂಟಿಕೊಂಡಿರುವುದು ನಿಮ್ಮ ಕಣ್ಣಿಗೆ ಕಾಣಿಸುತ್ತದೆ. ಹತ್ತಿರ ಹೋಗಿ ಪರೀಕ್ಷಿಸಿ ನೋಡಿದರೆ, ಇವು ಬಿಳಿ ನೊಣಗಳು ಎಂಬುದು ಸ್ಪಷ್ಟವಾಗುತ್ತದೆ. ಎರಡು ಮೂರು ದಿನ ಕಳೆಯುವಷ್ಟರಲ್ಲಿ ಇಡೀ ಹಾಳೆಯ ತುಂಬ ಬಿಳಿ ನೊಣಗಳು ಅಂಟಿಕೊಂಡು ಸತ್ತಿರುವುದು ಕಾಣುತ್ತದೆ. ನಾಲ್ಕೈದು ರೂಪಾಯಿಗಳ ಖರ್ಚಿನಲ್ಲಿ ನಿಮ್ಮ ತರಕಾರಿ ಗಿಡಗಳು ಬಿಳಿ ನೊಣದ ಕಾಟದಿಂದ ಮುಕ್ತವಾಗುವುದು ಗ್ಯಾರಂಟಿ.

ತತ್ವ: ಹಳದಿ ಬಣ್ಣ ಎದ್ದು ಕಾಣುವಂಥದು. ಇದು ಬಿಳಿ ನೊಣಗಳನ್ನೂ ಆಕರ್ಷಿಸುತ್ತದೆ. ಹತ್ತಿರ ಬಂದ ಅವು ಪ್ಲಾಸ್ಟಿಕ್ ಮೇಲೆ ಸವರಿರುವ ಎಣ್ಣೆಯಲ್ಲಿ ಸಿಕ್ಕಿಬಿದ್ದು, ಸತ್ತುಹೋಗುತ್ತವೆ. ವಿಷ ಬಳಸದೇ, ಅನಗತ್ಯ ಖರ್ಚು ಮಾಡದೇ ಬಿಳಿನೊಣದ ಹಾವಳಿಯನ್ನು ಹೀಗೆ ತಡೆಗಟ್ಟಬಹುದು.

–ಪ್ರೀತಮ್ ಪದ್ವಾಳ್

### ಸದಾ ಬರಕ್ಕೆ ತುತ್ತಾಗುವ, ಅತಿ ಹಿಂದುಳಿದ ತಾಲೂಕು ಪಾವಗಡದ ಯರ್ರಮ್ಮನಹಳ್ಳಿಯ ಯಶೋಗಾಥೆ

# ವಲಸೆ ತಪ್ಪಿಸಿದ ಕೆರೆ ಕೆಲಸ

ಭೂಷಣ್ ಮಿಡಿಗೇಶಿ



**ಈ** ಊರು ಮೊದಲು ಹೀಗಿರಲಿಲ್ಲ..........!

ಬೇಸಿಗೆ ಬಂತೆಂದರೆ ಕುಡಿಯುವ ನೀರಿಗೂ ತತ್ವಾರ.. ತೆರೆದ ಬಾವಿಗಳು ಬತ್ತಿ ದಶಕಗಳೇ ಕಳೆದಿದ್ದವು.... ಸಾಲ, ಸೋಲ ಮಾಡಿ ಕೊರೆಸಿದ್ದ ಕೊಳವೆ ಬಾವಿಗಳಲ್ಲಿ ಇದ್ದೂ ಇರದಂತೆ ಇಣುಕುತಿದ್ದ ನೀರು ಇತ್ತ ನೀರಾವರಿಗೂ ಸಾಕಾಗದೆ, ಅತ್ತ ಕುಡಿಯಲೂ ಸಾಕಾಗದ ಪರಿಸ್ಥಿತಿ. ಊರಲ್ಲಿ ವಯಸ್ಸಾದ ಹಿರಿಯರು ಮತ್ತು ಮಕ್ಕಳನ್ನು ಮಾತ್ರ ಕಾಣಬಹುದಿತ್ತು. ಬೇಸಾಯದ ಬೆನ್ನು ಹತ್ತಿ ಬಾಳು ಸವೆಸುತ್ತಿದ್ದ ಸಮುದಾಯಕ್ಕೆ ಬೇರೆ ಆಸರೆಯಿಲ್ಲದೆ ಊರಿಗೆ ಊರೇ ದೂರದ ಊರುಗಳಿಗೆ ಗುಳೇಹೋದ ನಿದರ್ಶನಗಳೂ ಇದ್ದವು...

ವ್ಯವಸಾಯ ವನ್ನೇ ಅವಲಂಬಿಸಿ ಜೀವನ ನಡೆಸುವ ಜನರೇ ಇಲ್ಲಿ ಹೆಚ್ಚು. ಪ್ರತಿಯೊಬ್ಬರಿಗೂ ಬೇಸಾಯ ಅನಿವಾರ್ಯ. ಬೇಸಾಯದ ಜೊತೆ ಯಲ್ಲಿ ಮೇಕೆ, ಕುರಿ ಸಾಕಾಣಿಕೆ ಯಂತಹ ಉಪಕಸುಬುಗಳು ಬದುಕಿಗೆ ಪೂರಕವಾಗಿವೆ. ಪ್ರತಿ ಬೇಸಿಗೆಯಲ್ಲಿ ದೂರದ ತುಮಕೂರು, ಕಲ್ಯಾಣದುರ್ಗ, ಬೆಂಗಳೂರಿಗೆ ಕೂಲಿ ಕೆಲಸಗಳಿಗಾಗಿ ವಲಸೆ... ಹೀಗೆ ಬವಣೆಯ ಜೊತೆಯಲ್ಲಿ ಬದುಕುತ್ತಿದ್ದ ಸಮುದಾಯ...



ಆಂಧ್ರಕ್ಕೆ ಹೊಂದಿಕೊಂಡಿರುವ ಯರ್ರಮ್ಮನ ಹಳ್ಳಿಯ ಊರಿನ ಸುತ್ತಲೂ ಬೆಟ್ಟ ಗುಡ್ಡಗಳು. 130 ಮನೆಗಳ ಯರ್ರಮ್ಮನಹಳ್ಳಿಯ ಜನ ಸಂಖ್ಯೆ ಸುಮಾರು 700. ಇಲ್ಲಿನ ಬೆಟ್ಟಗುಡ್ಡಗಳ ಜಲಾನಯನವನ್ನು ಅಶ್ರಯಿಸಿ ಇಲ್ಲಿ ಹಿಂದೆ ಇದ್ದ ಜಂಗಾಲರೆಂಬ ಬುಡಕಟ್ಟಿನ ಜನ "ಜಂಗಾಲರ ಕೆರೆ" ಯನ್ನು ಕಟ್ಟಿದಾರೆ. ಸುತ್ತಲೂ ಆವರಿಸಿರುವ ಗುಡ್ಡಗಳ ಮೇಲೆ ಸುರಿದ ಮಳೆ ನೀರು ನೇರವಾಗಿ ಕೆರೆಗೆ ಬರುತ್ತದೆ. ಸ್ವಲ್ಪ ಮಳೆಯಾದರೂ ಕೆರೆಗೆ ನೀರು ಬರುವ ಸೌಕರ್ಯವಿದೆ. ಕೆರೆ ಕಟ್ಟಿದಾಗಿನಿಂದಲೂ ಹೂಳೆತ್ತದ ಕಾರಣ ಕೆರೆ ತಟ್ಟೆಯಂತಾಗಿ, ನೀರು ನಿಲ್ಲುವ ಸಾಮರ್ಥ್ಯ ಕಳೆದುಕೊಂಡಿತ್ತು.

ತಾತನ ಕಾಲದಿಂದಲೂ ಕೆರೆಯ ಅಚ್ಚುಕಟ್ಟಿನಲ್ಲಿರುವ ತೆರೆದ ಬಾವಿಗಳಲ್ಲಿ ಕಪಿಲೆಯಲ್ಲಿ ನೀರೆತ್ತಿಕೊಂಡು ಇಲ್ಲಿ ಬೇಸಾಯ ಮಾಡುತ್ತಿದ್ದರು. ನೀರೂ ಸಾಕಷ್ಟು ಸಿಗುತ್ತಿತ್ತು. ಜೀವನ ನಿರ್ವಹಣೆ ಸುಲಭವಾಗಿತ್ತು. ದಿನ ಕಳೆದಂತೆ, ಕಪಿಲೆಗಳು ಮೂಲೆ ಸೇರಿ ಪಂಪ್ ಸೆಟ್‌ಗಳು ಬಾವಿಗಳ ಬೆನ್ನೇರಿ ಕುಳಿತವು. ಕರೆಂಟಿನ ಸಾಮರ್ಥ್ಯಕ್ಕೆ ನೀರೊದಗಿಸ ಲಾಗದೆ ಬಾವಿಗಳು ಬರಡಾದವು. ಅಂತರ್ಜಲ ಮಟ್ಟ ಆಳಕ್ಕಿಳಿದು, ನೀರ ಒರತೆ ಕಡಿಮೆಯಾಗಿ, ಕ್ರಮೇಣ ಕೃಷಿ ನಿರಾಶೆಯ ಅಂಚಿನತ್ತ ಸಾಗಿತು. ಯುವಕರೆಲ್ಲ ಜಲವಿಲ್ಲದ ಹೊಲದಲ್ಲಿ ನಮ್ಮದೇನೂ ಕೆಲಸವಿಲ್ಲ ಎಂದು ಊರಾಚೆ ನಡೆದು ಹೊಲಗಳೆಲ್ಲಾ ಬೀಳು ಬಿದ್ದವು.

ಈ ಪರಿಸ್ಥಿತಿಯಲ್ಲಿ ಯರ್ರಮ್ಮನಹಳ್ಳಿಯ ಸಮುದಾಯ, ಸರ್ಕಾರದ ಜೊತೆ ಕೈಜೋಡಿಸಿ 2007 ರಲ್ಲಿ ಕೆರೆ ಕೆಲಸವನ್ನು ಕೈಗೆತ್ತಿಕೊಂಡಿತು. ಕರ್ನಾಟಕ ಸರ್ಕಾರದ ಜಲ ಸಂವರ್ಧನೆ ಯೋಜನಾ ಸಂಘದ ವತಿಯಿಂದ ಇದೇ ಹಳ್ಳಿಯಲ್ಲಿರುವ ಕೆರೆಯಲ್ಲಿ ಹೂಳೆತ್ತುವ ಕಾಮಗಾರಿ ಪೂರ್ಣವಾಯಿತು. ಕ್ರಮೇಣ ಹಳ್ಳಿಯ ಚಿತ್ರಣವೇ ಬದಲಾಯಿತು.

ಈಗ ಒಂದೂವರೆ ದಶಕಗಳಿಂದ ಒಣಗಿದ್ದ ತೆರೆದ ಬಾವಿಗಳೆಲ್ಲ ನೀರು ತುಂಬಿ ಮರುಜೀವ ಪಡೆದಿವೆ. ಕೊಳವೆ ಬಾವಿಗಳು ಬೇಸಾಯಕ್ಕೆ ಮರುಜನ್ಮ ನೀಡಿ, ಇಡೀ ಊರಿಗೆ ಊರೇ ಮತ್ತೆ ಒಕ್ಕಲುತನದ ತೆಕ್ಕೆಗೆ ಮರಳಿ ನಿಂತಿದೆ.



## ಇದೇನು?

ಈ ಚಿತ್ರದಲ್ಲಿ ಏನು ನಡೆಯುತ್ತಿದೆ? ಇವರಿಬ್ಬರು ಹೆಣ್ಣುಮಕ್ಕಳು ಏನು ಮಾಡುತ್ತಿದ್ದಾರೆ. ನಿಮಗೆ ಗೊತ್ತಾಯಿತೆ? ತಿಳಿದರೆ ನಮಗೆ ಬರೆದು/ಇಮೇಲ್ ಮಾಡಿ ತಿಳಿಸಿ. ಗೊತ್ತಾಗದಿದ್ದರೆ ಮುಂದಿನ ಸಂಚಿಕೆವರೆಗೆ ಕಾಯಿರಿ!




ಬಿದಿರಮ್ಮ
–ಜನಪದ ಕಂಡಂತೆ



ಬೆಳೆವ ಸಿರಿ
ಮೊಳಕೆಯಲ್ಲಿ



ನಾಗದಾಳಿ
ಸಂಸ್ಕೃತದಲ್ಲಿ:
ಸರ್ಪದೃಂಷ್ಟ್ರಾ
ಇಂಗ್ಲಿಷ್‌ನಲ್ಲಿ:
ಕಾಮನ್ ರೂ
ಹರ್ಬ್ ಆಫ್ ಗ್ರೇಸ್
ಸಸ್ಯಶಾಸ್ತ್ರೀಯಹೆಸರು:
ರುಟಾ ಗೇವಿಯೊಲೆನ್ಸ್



ತಾದಲಡಕು ಗ್ರಾಮದ
ಚಿಟ್ಟನ ಬಾವಿ



ಬಯಲುಸೀಮೆಯ
ಜಲನಿಧಿ–
ತಲಪರಿಗೆ

## ಕಾರ್ಟೂನ್

ಎಚ್ ಎಸ್ ವಿಶ್ವನಾಥ್




ಏನೂ ಯೋಚನೆ ಮಾಡ್‌ಬೇಡ... ನಿನ್ ಸಮಸ್ಯೆ ಸರಿಮಾಡ್ಲಿಕ್ಕೆ ಮತ್ತೊಮ್ಮೆ ಚೀನಾಕ್ಕೆ ಹೊರಟಿದ್ದೇವೆ.